SRI D. DEVARAJ URS.—Sir, after the question hour, we shall commence the discussion on the budget. If there is any Government business like 'papers to be laid on the table' etc, let it go on because it will take only 5 to 10 minutes. After that, budget speeches may be commenced and let it end at 6.00 P.M. If this arrangement is implemented, the hon. Members on the Opposition side will have the satisfaction of having spent their time sufficiently on the budget discussion. On the paper we have got 24 hours for six days, but practically it will not be so. I am sure we will not get half the number of hours which we have now fixed, if this tendency continues.

SRI S. R. BOMMAI—All these things could be discussed and decided in Business Advisory Committee meeting.

Financial Business

General Discussion on the Budget.

† ಶ್ರೀ ಬಿ. ಬಸವಲಿಂಗಪ್ಪ.—(ಯಲಹಂಕ) ಮಾನ್ಯ ಅಧ್ಯಕ್ಷರೇ, ನಾನು ಸೋಮವಾರ ಆಯವ್ಯಯದ ಮೇಲೆ ಮಾತನಾಡುತ್ತಾ ಒಂದು ಮಾತು ಹೇಳಿದ್ದೆ. ಏನೆಂದರೆ ಅಂದಾಜು ಪಟ್ಟಿಯನ್ನು ತಯಾರು ಮಾಡುವ ಮುನ್ನ ಸರ್ಕಾರಕ್ಕೆ ಸ್ವತಃ ನಿರ್ದೇಶನ ಇರಲಿಲ್ಲ they were not guided ಎಂದು ಹೇಳಿದ್ದೆ. ಮತ್ತು ಹಿಂದಿನ ಸರ್ಕಾರದವರು ಯಾವರೀತಿಯಾಗಿ ಹಣಕಾಸಿನ ಸುಭದ್ರತೆಯನ್ನು ಪಾಲನೆ ಮಾಡಿ, ಸರ್ಕಾರದ ಆದಾಯವಾಗಲಿ, ಖರ್ಚಾಗಲೀ ಸಮತೂಕ ಮಾಡುವುದಕ್ಕೆ ಯಾವರೀತಿ ಪ್ರಯತ್ನ ಮಾಡಿದ್ದರು ಎಂಬುದನ್ನು ನಾನು ಹೇಳಿದ್ದೇನೆ. ಈಗ ಖೋತಾ ಬಜೆಟ್ ಏನು ತಯಾರು ಮಾಡಿದ್ದಾರೆ ಈ ರೀತಿ ಮಾಡುವ ಅವಶ್ಯಕತೆಯೇ ಇರಲಿಲ್ಲ ಎಂದು ಸ್ಪಷ್ಟಪಡಿಸಿದ್ದೇನೆ. ಅಂದಾಜು ಪಟ್ಟಿಯನ್ನು ತಯಾರು ಮಾಡುವಾಗ ನಮಗೆ ಸಾಲದ ಹೊರೆ ಏನಿತ್ತು, ನಾವು ಎಷ್ಟು ಸಂಸ್ಥೆಗಳು ಮತ್ತು ಕಾರ್ಪೊರೇಷನ್‌ಗಳಿಗೆ ಗ್ಯಾರಂಟಿ ಕೊಟ್ಟಿದ್ದೇವೆ, ಅವರು ಹಣ ವಾಪಸ್ ಕೊಟ್ಟಿದ್ದಾರೋ ಇಲ್ಲವೋ, ಹಣದ ವಸೂಲಾತಿ ವಿಚಾರದಲ್ಲಿ ಯಾವರೀತಿ ಕ್ರಮ ತೆಗೆದುಕೊಳ್ಳಲಾಗಿದೆ ಇದನ್ನೆಲ್ಲಾ ಯೋಚನೆ ಮಾಡಬೇಕು. Resources mobilisation – ಎಂದು ಏನು ಹೇಳುತ್ತಾರೆ ಆ ರೀತಿ ಪ್ರಯತ್ನ ಮಾಡಿದ್ದಾರೆಯೇ ಎಂದರೆ ಪ್ರಯತ್ನವನ್ನೇ ಮಾಡಿಲ್ಲ. ಒಂದು ಉದಾಹರಣೆ ಕೊಡಬೇಕೆಂದರೆ ೧೯೭೮-೭೯ನೇ ಫೈನಾನ್ಸ್ ಅಕೌಂಟ್ಸಿನಲ್ಲಿ ಸಾಲ ಎಷ್ಟಿದೆ ಎಂದರೆ ೯೯.೨೪ ಕೋಟಿ ರೂಪಾಯಿಗಳು. ೯೯ ಕೋಟಿ ೨೪ ಲಕ್ಷ ರೂಪಾಯಿ ಸರ್ಕಾರದ ಹೊರೆ ಇದೆ. ಈ ಸಾಲದ ಹೊರೆಯನ್ನು ತೀರಿಸುವುದಕ್ಕೆ ಯಾವರೀತಿಯಾಗಿ ಪ್ರಯತ್ನ ಮಾಡಿದ್ದಾರೋ ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವಂತೆ ಈ ಆಯವ್ಯಯಪಟ್ಟಿಯಲ್ಲಿ ಸರಿಯಾಗಿ ನಮೂದಾಗಿಲ್ಲ. ಬೇರೆ ವಿಚಾರ ಎಲ್ಲಾ ಹೇಳದೆ, ಆದರೆ ಇಷ್ಟು ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದಕೆ ಯಾವರೀತಿ ಯೋಚನೆ ಮಾಡಿದೆ ಸರ್ಕಾರ ಮತ್ತು ಈ ರಾಜ್ಯದ ಹಣಕಾಸಿನ ಸುಭದ್ರತೆಯನ್ನು ಕಾಪಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆಯೇ ಎಂಬುದಕ್ಕೆ ಒಂದು ಚಕಾರ ಶಬ್ದವೂ ಇಲ್ಲ.

In Page No. 29 it is said :

"In addition to the above, balances at the Credit of earmarked and other funds as also certain deposits to the extent to which they have not been invested but are mraged with the general cash balance of Government also constitute the liability of Government. Such liability at the end of March 1979 was Rs. 163.25 crores as shown below"

Further details are there.

ಆದುದರಿಂದ, ಸೆಕ್ಯೂರಿಟಿ ವ್ಯವಸ್ಥೆ ಮಾಡಿ ಡಿಪಾಜಿಟ್‌ಗಳನ್ನು ಸರಿಯಾಗಿ ನೋಡಿಕೊಂಡು ಆರ್ಥಿಕಾಭಿವೃದ್ಧಿಯನ್ನು ವೃದ್ಧಿಪಡಿಸಿಕೊಳ್ಳದೆ ಹೋದರೆ ಇನ್ನು ಯಾವ ರೀತಿ ನೀವು ಈ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುವ್ಯವಸ್ಥಿತವಾಗಿಡುತ್ತೀರೆಂದು ನಂಬೋಣ ? ಹಿಂದಿನ ಸರ್ಕಾರ ವಿವಿಧ ನಗರಸಭೆ, ಮುನಿಸಿಪಾಲಿಟಿ ಮತ್ತು ಮಂಡಲಿಗಳಿಗೆ ಸುಮಾರು ೧೦೮ ಕೋಟಿ ರೂಪಾಯಿಗಳಷ್ಟು ಹಣಕ್ಕೆ ಗ್ಯಾರಂಟಿ ಕೊಟ್ಟಿತು. ಅದರಲ್ಲೀಗ ಎಷ್ಟು ವಸೂಲ್ಮಾಡಲಾಗಿದೆ ? ಮತ್ತು ಅದನ್ನು ನಿರ್ದಿಷ್ಟವಾಗಿ ಯಾವತ್ತು ಮರುಪಾವತಿ ಮಾಡಬೇಕೆಂದು ಗಮನಿಸಲಾಗಿದೆಯೆ ? ಗಮನಿಸಿಲ್ಲ. ಆದುದರಿಂದಲೇ, ಆಯವ್ಯಯವನ್ನು ತಯಾರು ಮಾಡುವಾಗ ಇದರ ಬಗ್ಗೆ ಪೂರ್ಣ ವಿವರವನ್ನು ಕೊಟ್ಟಿಲ್ಲ. ಹೀಗಾಗಿ, ನೀವು ವರಮಾನ ಅಂದಾಜು ಮಾಡಿರುವುದಕ್ಕೂ ಮತ್ತು ಖರ್ಚು ಮಾಡಬೇಕೆಂದಿರುವುದಕ್ಕೂ ಒಂದಕ್ಕೊಂದಕ್ಕೆ ಸಮನ್ವಯವಿಲ್ಲವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಕೇಂದ್ರದ ಹಣಕಾಸಿನ ಸಚಿವರಾದ ಶ್ರೀ ವೆಂಕಟರಾಮನ್ ಅವರು ಮೊನ್ನೆ ದಿವಸ ಒಂದು ಮಾತನ್ನು ಹೇಳಿದ್ದಾರೆ. ಅದು "ಇಂಡಿಯನ್ ಎಕ್ಸ್‌ಪ್ರೆಸ್ – ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದನ್ನೇನಾದರೂ ತಾವು ಗಮನಿಸಿದ್ದೀರೋ ಅಥವಾ ಇಲ್ಲವೋ ಎನ್ನುವ ಸಂಶಯ ನನಗಿದೆ.

"PEGGING INFLATION MAJOR OBJECTIVE"

This is in Indian Express dated 14th June 1980.

"On the one hand, the Minister emphasised that the quantum of d ficit financing should be well within the tolerance limits of the economy. On the other, the scope for addit onal resource mobilisation through taxation was 'somewhat limited in view of the lack of growth in economy and the substantial burden imposed by the large oil price increase'. He highlighted the need for greater effort to realise the full potential of the existing system through better administration".

"The survey pointed out that the full impact of these increases had not yet been felt, but there is little doubt that it will extend to other sectors of the economy. Directly they will raise c sts in all industries in which oil or oil products are inputs".

"The survey showed that steady increase in the Government expenditure had led to heavy reliance on deficit financing. It highlighted the need to review and eliminate all wasteful and unproductive e penditure. While it would not be possible to cut non-developmental expenditure like Defence, other non-developmental and administrative expenditure and infructuous subsidies would have to be carefully reviewed and pruned if necessary, the survey said".

ಮಾನ್ಯ ಅಧ್ಯಕ್ಷರೇ, ಶುಕ್ರವಾರದ ದಿವಸ ನಾನಿದೆಲ್ಲವನ್ನೂ ಹೇಳಿದ್ದೇನೆ. ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಧನ ಸಹಾಯ ಕೊಡುವುದಕ್ಕಾಗಿ ಇದರಲ್ಲಿ ಹಣವನ್ನು ಕಾಣಿಸಿದ್ದಾರೆ. ಇಂತಹ ಖರ್ಚಿನ ಬಾಬುಗಳು "ಅನುತ್ಪಾದಕಾ ವೆಚ್ಚಗಳು – ಇವುಗಳ ಬಗ್ಗೆ ಹೆಚ್ಚು ಗಮನ ಕೊಟ್ಟು ಹಾಗೆ ಉತ್ಪಾದಕಾ ವೆಚ್ಚಗಳ ಕಡೆಗೂ ಗಮನ ಕೊಡದೆ ಹೋದರೆ ಹಣಕಾಸಿನ ವ್ಯವಸ್ಥೆಯನ್ನು ಹೇಗೆ ಕಾಪಾಡುತ್ತೀರಿ ? ಮೊನ್ನೆಯ ಪತ್ರಿಕೆಯಲ್ಲಿ ಒಂದು ಸುದ್ದಿಯನ್ನು ಓದಿದೆ. ನಮ್ಮ ಸರ್ಕಾರದ ರಾಜ್ಯ ಸಚಿವರಾದ ಶ್ರೀ ಕಸಬೆಯವರು ರಾಯಚೂರಿನಲ್ಲಿ ಮಾತನಾಡುತ್ತಾ ಈ ರಾಜ್ಯದ ಎಲ್ಲಾ ಪೂಜಾರಿಗಳಿಗೂ ೧೦೦ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ಅವರ ಪ್ರಕಾರವೇ ಈ ರಾಜ್ಯದಲ್ಲಿ ಸುಮಾರು

ಮೂವತ್ತೈದು ಸಾವಿರ ಜನ ಪೂಜಾರಿಗಳಿದ್ದಾರೆ. ಇನ್ನೂ ಹೆಚ್ಚಿಗೆ ಇರಬಹುದು. ಬಹುಶ : ಅವರಿಗೆ ಎಷ್ಟು ಪೂಜಾರಿಗಳಿದ್ದಾರೆ ಎನ್ನುವ ಪಟ್ಟಿ ಗೊತ್ತಿದೆಯೋ ಅಥವಾ ಇಲ್ಲವೋ ನನಗೆ ತಿಳಿದಿಲ್ಲ. ಮಾನ್ಯ ಸಚಿವರು ಈ ಹೇಳಿಕೆ ಕೊಟ್ಟಾಗ ಈ ಬಗ್ಗೆ ಮಂತ್ರಿ ಮಂಡಲದವರು ತೀರ್ಮಾನ ತೆಗೆದುಕೊಂಡಿದ್ದರೆ ? ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಮಾನ್ಯ ಕಸಬೆಯುವರು ಮುಜರಾಯಿ ಸಚಿವರಾಗಿದ್ದಾರೆ ; ಅವರು ಪೂಜಾರಿಗಳಿಗೆ ೧೦೦ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದ ಮೇಲೆ ಎಲ್ಲ ಪೂಜಾರಿಗಳಿಗೂ ಅದನ್ನು ಕೊಡಬೇಕಾಗುತ್ತದೆ. ಹಾಗೆ ಕೊಡಬೇಕಾದಾಗ ಪೂಜಾರಿಗಳನ್ನು ನಿಯಮಗಳ ಪ್ರಕಾರ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಪೂಜೆ ಮಾಡುವಲ್ಲಿ ಆಚಾರ ಸಂಹಿತೆ ಬೇಕಾಗುತ್ತದೆ ; ಅರ್ಹತೆ ಪ್ರಶ್ನೆ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅರ್ಹತೆ ಬೇಕಾಗುತ್ತದೆ. ಆಗಮದಲ್ಲಿ ಉತ್ತೀರ್ಣರಾಗ ಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಆಗಮ, ಓಗಮ – ಎಲ್ಲ ಅರ್ಥವಿಲ್ಲದ ಮಾತು

ಶ್ರೀ ಎಂ. ವೀರಪ್ಪಮೊಯಿಲಿ.—ಎಲ್ಲಾ ಬಿಟ್ಟು ಪೂಜಾರಿಗಳ ಮೇಲೆ ಏತಕ್ಕೆ ತಮ್ಮ ವಕ್ರದೃಷ್ಟಿ ?

ಶ್ರೀ ಬಿ. ಬಸವಲಿಂಗಪ್ಪ.—ಈ ಸರ್ಕಾರ ಯಾವ ಕೆಲಸ ಮಾಡಿದರೆ ಈ ರಾಜ್ಯದ ಹಣದ ವ್ಯವಸ್ಥೆ ಸರಿಯಾದೀತು ಎನ್ನುವುದರ ಬಗ್ಗೆ ನಾನಿದೆಲ್ಲವನ್ನೂ ಹೇಳುತ್ತಿದ್ದೇನೆ. ಈಗೇನು ಅವರು ಸಾಯುತ್ತಿದ್ದಾರೆಯೆ ? ಉಪವಾಸವಿದ್ದಾರೆಯೆ ? ಬೇರೆ ಯಾರೂ ಸಾಯುತ್ತಿಲ್ಲವೆ ? ಹಳ್ಳಿಗಾಡುಗಳಲ್ಲಿ ಮನೆ ಇಲ್ಲದೆ, ಜಮೀನಿಲ್ಲದೆ ಸಾಯುತ್ತಿರುವುದನ್ನು ನೋಡಿದ್ದೀರಾ ? ಸಾಯುತ್ತಿರುವ ಜನರ ಕಡೆ ನೀವು ಗಮನ ಕೊಡುವುದಿಲ್ಲವೆ ? ಯಾರು ತುಪ್ಪ, ಹಣ್ಣುಕಾಯಿ ತಿಂದು ಮೈ ಬೆಳೆಸಿಕೊಂಡಿರುತ್ತಾರೆ ಅವರಿಗೆ ಕೊಡುವುದು ನ್ಯಾಯವೆ ? ಸರ್ಕಾರದ ನೀತಿ ಎಷ್ಟು ಚೆನ್ನಾಗಿದೆ ; ಮಾನ್ಯ ದೇವರಾಜ ಅರಸ್ ಅವರು ಆಗಾಗ್ಗೆ ಹೇಳುತ್ತಿದ್ದರು ; ಮೊನ್ನೆ ಚುನಾವಣೆ ಕಾಲದಲ್ಲೂ ಹೇಳುತ್ತಿದ್ದರು. ಅದೇನೆಂದರೆ, ಕೇಂದ್ರ ಸರ್ಕಾರದ ಗಮನ ಸ್ಥಿತಿವಂತರು ಮತ್ತು ಹಣವಂತರ ಕಡೆ ಹರಿಯುತ್ತಿದೆಯೇ ವಿನಹ ಬಡವರ ಕಡೆ ಹರಿಯುತ್ತಿಲ್ಲವೆಂದು ಹೇಳುತ್ತಿದ್ದರು. ಅದನ್ನು ಸಮರ್ಥನೆ ಮಾಡುವುದಕ್ಕಾಗಿ ನಾನಿದನ್ನು ಹೇಳುತ್ತಿದ್ದೇನೆ. ಪೂಜಾರಿಗಳಿಗೆ ೧೦೦ ರೂಪಾಯಿಗಳನ್ನು ಕೊಡುವುದನ್ನು ಮಂತ್ರಿ ಮಂಡಲದಲ್ಲಿ ನಿರ್ಣಯ ವಾಗಿಲ್ಲವೆಂದು ನಾನು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ. ಮಾನ್ಯ ಮಂತ್ರಿಗಳಿಗೆ ಹತೋಟಿ ಇದೆಯೇ–ಮಾತನಾಡಲಿಕ್ಕೆ ? ಪಾಲಿಸಿ ಸ್ಟೇಟ್‌ಮೆಂಟನ್ನು ಕುರಿತು ಮಾತನಾಡುವಾಗ ಅವರಿಗೆ ಹತೋಟಿ ಇತ್ತೆ ? ಅವರು ಹೇಳಿದ್ದನ್ನು ಜಾರಿಗೆ ಕೊಡ ಬೇಕಾಗುತ್ತದೆ ; ಅದನ್ನು ಮಂತ್ರಿ ಮಂಡಲ ಒಪ್ಪಬೇಕಾಗುತ್ತದೆ. ಬಹುಶ : ಮಂತ್ರಿಗಳು ಹೊಸದಾಗಿ ಆಗಿರಬಹುದು. ಅಂದಮಾತ್ರಕ್ಕೆ ಅವರು ಏನು ಬೇಕಾದರೂ ಹೇಳುವುದು ಸರಿಯಲ್ಲ.

ಮೊನ್ನೆ ದಿವಸ ಮುಳಬಾಗಿಲಿನಲ್ಲಿ ಬ್ರಾಹ್ಮಣ ಸಮ್ಮೇಳನವನ್ನು ಉದ್ಘಾಟನೆ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೋಗುವುದೆ ? ಇದು ನ್ಯಾಯವೆ ? ಇನ್ನೇನು ಉಳಿದಿಲ್ಲ. ಶ್ರೀ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಯಾಗಿದ್ದಾಗ ಶ್ಯಾನುಭೋಗರಿಗೆ ಪರಿಹಾರ ಕೊಡಿ ಎಂದು ಹೇಳಿಬಿಟ್ಟರು. ನಾನು, ಕಾನೂನು ಪ್ರಕಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದೆ. ಆದರೂ, ಪಾಪ ಕೊಟ್ಟುಬಿಡಿ ಎಂದು ಹೇಳಿದರು. ಹೋಗಲಿ ಪಾಪ ಎಂದು ಕೊಟ್ಟೆವು. ಆದುದರಿಂದ, ಬಡವರ ಕಡೆ ಗಮನ ಹರಿಸುವುದನ್ನು ಬಿಟ್ಟು ಪೂಜಾರಿಗಳ ಕಡೆ ಹರಿಸುವುದೆ ? ಬ್ರಾಹ್ಮಣ ಸಮ್ಮೇಳನ ಏತಕ್ಕೆ ?

೪.೩೦ ಪಿ. ಎಂ.

ಈಗ ಜಿಲ್ಲಾ ಸಮ್ಮೇಳನಗಳನ್ನು ಶುರು ಮಾಡಿದ್ದಾರೆ. ರಾಜಕೀಯದವರು ಸಮಾಜಸೇವಕರೂ ಯಾರಾದರೂ ಮಾಡಿಕೊಳ್ಳಲಿ ನನ್ನ ಅಭ್ಯಂತರವಿಲ್ಲ. ಇಲ್ಲಿಯ ಒಬ್ಬ ಮಂತ್ರಿ ಅಲ್ಲಿಗೆ ಹೋಗಿ ಅಧ್ಯಕ್ಷತೆಯನ್ನು ವಹಿಸಿಕೊಂಡು ನಾವು ಒಗ್ಗಟ್ಟಾಗಿ ಇರಬೇಕು. ಹಾಗೆ ಇರಬೇಕು, ಹೀಗೆ ಇರಬೇಕು ಅಂತ ಹೇಳಿದರೆ ಹೇಗೆ ? ಇವೊತ್ತು ಬ್ರಾಹ್ಮಣರೆಲ್ಲಾ ಒಗ್ಗಟ್ಟಾಗಬೇಕು ಅಂದರೆ ಏನು ಅರ್ಥ. ಇವೊತ್ತು ಹೊಟ್ಟೆಗೆ ಊಟ ಇಲ್ಲದವರು ನನಗೆ ಹೊಟ್ಟೆಗೆ ಊಟ ಇಲ್ಲ ಅಂತ ಬಡಿದುಕೊಂಡರೆ, ಹೊಟ್ಟೆಗೆ ಊಟ ಇದ್ದವನು, ನನಗೆ ಹೊಟ್ಟೆಗೆ ಊಟ ಇಲ್ಲ ಅಂತ ಬಡಿದು ಕೊಳ್ಳುವುದು ಅಂದರೆ ಏನು ಅರ್ಥ. ಇದಕ್ಕೆ ಪ್ರೋತ್ಸಾಹ ಮಾಡಲಿಕ್ಕೆ ಹೊರಟಿದ್ದೀರಾ ಇನ್ನು ಸಂಸ್ಕೃತ ಬೇಕು ಅಂತ ಹೊರಟಿ

ದ್ದೀರಾ. ಈ ದೇಶದಲ್ಲಿ ಸಂಸ್ಕೃತ ಯಾರಿಗೆ ಬೇಕು. ನಾನು ಸಂಸ್ಕೃತ ಪಾಸ್ ಮಾಡಿದ್ದೇನೆ ಬರೆಯಲಿಕ್ಕೆ ಬರಬಹುದು ಆದರೆ ಓದಲಿಕ್ಕೆ ಬರುವುದಿಲ್ಲ ಅದೇನು ವ್ಯವಹಾರದ ಭಾಷೆ ಏನು ? ಯಾರಾದರೂ ಕಲಿತುಕೊಂಡರೆ ಆಕಾಶವಾಣಿಯಲ್ಲಿ ಕೆಲಸ ಸಿಕ್ಕಬಹುದು. ದಿವಸ ಆಕಾಶವಾಣಿಯಲ್ಲಿ ೧೫ ನಿಮಿಷ ವೇಸ್ಟ್ ಅದನ್ನು ಯಾರು ಕೇಳುತ್ತಾರೋ ಯಾರು ಅರ್ಥ ಮಾಡಿಕೊಳ್ಳುತ್ತಾರೋ. ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಸ್ಕೃತದ ಮೇಲೆ ಏತಕ್ಕೆ ಬಸವಲಿಂಗಪ್ಪನವರಿಗೆ ಕಣ್ಣು. ಸಂಸ್ಕೃತ ಓದುವವರು ಓದಲಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಮಣ್ಣಿನ ಕೆಲಸ ಮಾಡಬೇಕು. ಸಂಸ್ಕೃತ ಕಲಿತರೆ ಏನು, ಬಿಟ್ಟರೆ ಏನು, ಕೆಲಸ ಸಿಕ್ಕುವುದಿಲ್ಲ. ಅದೂ ಅಲ್ಲದೇ ನಿಮಗೆ ಯಾರು ಹೇಳಿಕೊಡುತ್ತಾರೆ. ಹೇಳಿಕೊಡುವವರಿಗೆ ಎಷ್ಟು ಜನರಿಗೆ ಅಪಾಯಿಂಟ್‌ಮೆಂಟ್ ಕೊಡುತ್ತೀರಾ ? ಈ ದೇಶದಲ್ಲಿ ಸಂಸ್ಕೃತ ಆಗಬೇಕು. ಪ್ರೋತ್ಸಾಹ ಆಗಬೇಕು ಅಂದರೆ ಸಂಸ್ಕೃತ ಓದಿರುವವರು ಯಾರು, ಬ್ಯಾಡರೋ, ಬೆಸ್ತರೋ, ಕುರುಬರೋ, ಕಂಬಾರರೋ, ಅವರು ಏನಾದರೂ ಓದಿದ್ದಾರೆಯೇ ? ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಏನಾದರೂ ಪ್ರಾವಿಣ್ಯತೆಯನ್ನು ಹೊಂದಿದ್ದಾರೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೆ, ಬ್ಯಾಡರು, ಬೆಸ್ತರಿಗೆ ಸಂಸ್ಕೃತ ಬರುತ್ತದೆಯೇ ಅಂತ ಮಾನ್ಯ ಬಸವಲಿಂಗಪ್ಪನವರು ಕೇಳುತ್ತಿದ್ದಾರೆ. ಅವರು ಬಳಸುವಂತಹ ಭಾಷೆಯನ್ನು ಇಲ್ಲಿ ಹೇಳಲಿಕ್ಕೆ ಆಗುವುದಿಲ್ಲ. ಅವರು ಮಾತನಾಡುವುದು ಸಂಸ್ಕೃತದಲ್ಲಿ ಬೈದ ಹಾಗೆ ಇರುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಸಂಸ್ಕೃತ ಕಲಿಯದೇ ಇದ್ದರೆ ಸಂಸ್ಕಾರವೇ ಇಲ್ಲ ಅಂತಾರೆ. ಸಂಸ್ಕೃತ ಏನಿದೆ ಇದನ್ನು ಸಾವಿರಾರು ವರ್ಷದಿಂದ ಕಲಿತುಕೊಂಡಿದ್ದಾರೆ. ಕಲಿತು ಕೊಳ್ಳಬೇಕು ಅಂತ ಹೇಳಿದ್ದು ಹೇಳಿದ್ದೇ, ಯಾರು ಕಲಿಯಬೇಕು. Sri H. Gangadharan I know how much you are giving for others. How much you are going to spend ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಗಂಗಾಧರನ್ ಅವರು ಎಂ. ಎಲ್. ಎ. ಅವರೊಬ್ಬರು ಸಂಸ್ಕೃತದಲ್ಲಿ ಚೆನ್ನಾಗಿ ಕಲಿತುಕೊಂಡಿದ್ದಾರೆ ಇವರ ಹಾಗೆ ಎಷ್ಟು ಜನರು ಕಲಿತು ಕೊಂಡಿದ್ದಾರೆ. ಮೂರುನಾಲ್ಕು ಜನ ಸಿಕ್ಕಬಹುದು. ದೇಶದಲ್ಲಿ ಎಲ್ಲರೂ ಸಮನಾಗಿ ಅನುಸರಿಸಲಿಕ್ಕೆ ಯಾರಿಗೆ ಆಗುತ್ತದೆ. ಇದು ಸಾಧ್ಯವೇ ?

ಶ್ರೀ ಹೆಚ್. ಗಂಗಾಧರನ್.—ನೀವು ಹೊಸದಾಗಿ ಏನು ಖರ್ಚು ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಡಾ. ಅಂಬೇಡ್ಕರ್ ಸಂಸ್ಕೃತ ಕಲಿತರು, ಯಾರೂ ಹೇಳಿಕೊಡಲಿಲ್ಲ. ಅವರು ನಾನು ಇದನ್ನು ತಿಳಿದುಕೊಳ್ಳಬೇಕು ಅಂತ ಕಲಿತರು. ನಾನೂ ಕೂಡ ಅದೇ ರೀತಿ ಪ್ರಯತ್ನ ಮಾಡಿದೆ ಇವರ ಸಮಾಚಾರ ತಿಳಿದುಕೊಳ್ಳಲಿಕ್ಕೆ ಹೈಯರ್ ಫಿಲಾಸಫಿಗೆ ಹೋಗಿದ್ದೆ. ಇದನ್ನು ಪ್ರಾರಂಭ ಮಾಡುವುದರಿಂದ ಪ್ರಯೋಜನ ಎಷ್ಟಾಗುತ್ತದೆ ಎನ್ನುವುದನ್ನು ಲೆಕ್ಕಹಾಕಬೇಕು. ಅದನ್ನು ಬಿಟ್ಟು ನಮ್ಮ ಜಾತಿಗೆ ಎಷ್ಟು ಅನುಕೂಲವಾಗುತ್ತದೆ, ಇದರಿಂದ ಯಾರು ಯಾರು ಅನ್‌ಎಂಪ್ಲಾಯ್ಡ್ ಇದ್ದಾರೆ ಅಂತ ಪ್ರಯತ್ನ ಮಾಡಿ ಸರ್ಕಾರ ನಡೆಸುವುದಾದರೆ ನೀವು ಎಲ್ಲಿಯವರೆಗೆ ನಡೆಸಲಿಕ್ಕಾಗುತ್ತದೆ. ದಯಮಾಡಿ ಈ ಕೆಲಸ ಮಾಡಲಿಕ್ಕೆ ಹೋಗಬೇಡಿ. ಇನ್ನು ಮಾನ್ಯ ಗುಂಡೂರಾವ್ ಅವರು ಬಂದ ತಕ್ಷಣ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಂಡು ಸುಮಾರು ೪೩ ಬೋರ್ಡ್‌ಗಳನ್ನು ಅಬಾಲಿಷ್ ಮಾಡಿದರು. ಆದರೆ ಕೆಲವರನ್ನು ಮಾತ್ರ ಹಾಗೆಯೇ ಚೇರ್‌ಮನ್ ಮಾಡಿ ಮುಂದುವರಿಸಿದ್ದಾರೆ. ರೆವಿನ್ಯೂ ಸೆಕ್ರೆಟರಿಯಾಗಿದ್ದವರನ್ನು ಈಗ ಡೆವಲಪ್‌ಮೆಂಟ್ ಸೆಕ್ರೆಟರಿ ಮಾಡಿದ್ದೀರಿ. ಭದ್ರಾವತಿ ಐರನ್ ಅಂಡ್ ಸ್ಟೀಲ್‌ನಲ್ಲಿ ಸ್ಥಳ ಕೊಟ್ಟು ಅವರಿಗೆ ಒಂದು ಮರ್ಸಿಡೀಸ್ ಬೆಂಜ್ ಕಾರು ಕೊಟ್ಟು ಓಡಾಡಲಿಕ್ಕೆ ಬಿಡುವುದು. ಈ ಕೆಲಸ ಬೇರೆಯವರ ಕೈಯಲ್ಲಿ ಆಗುವುದಿಲ್ಲ ಏನು ? ಈಗ ತಮಗೆ ಸಂಸ್ಕೃತ ಆಗಬೇಕು. ಬ್ರಾಹ್ಮಣರ ಸಮ್ಮೇಳನ ಆಗಬೇಕು. ಪೂಜಾರಿಗಳಿಗೆ ಸಂಬಳ ಕೊಡುವುದು ಆಗಬೇಕು. ಇಂತಹ ಸೆಕ್ರೆಟರಿಗಳಿಗೆ ಅವರ ಉದ್ಯೋಗದ ಜೊತೆಗೆ ಇನ್ನೊಂದು ಕೊಟ್ಟು ಜಾಸ್ತಿ ಮಜಾ ಮಾಡುವುದಕ್ಕೆ ಬಿಟ್ಟಿದ್ದೀರಾ. ಪ್ರತಿ ವರ್ಷ ಕೇಂದ್ರದಲ್ಲಿ ಅರ್ಥಮಂತ್ರಿಗಳು ಏನು ಹೇಳುತ್ತಾರೆ ಅದಕ್ಕೆ ತದ್ವಿರುದ್ಧವಾಗಿ ಎಕ್ಸ್‌ಪೆಂಡಿಚರ್ ಮಾಡಲಿಕ್ಕೆ ಹೊರಟಿದ್ದೀರಾ. ತಾವು ಈ ರೀತಿ ಮಾಡಲಿಕ್ಕೆ ಹೊರಟರೆ ಮುಂದಿನ ಪೀಳಿಗೆಗೆ ಸರ್ಕಾರ ಉಳಿಸುತ್ತೀರಾ ಎಂದು ಕೇಳುತ್ತೇನೆ. They are incapable of recover-

ing the dues as they want to please all. They want to encourage all. They will not go to the extent of recovering the loans from the influential people. Even at the end of the year, I am sure that I will put the same question. How much you have done; how much the previous Government has recovered and how much is left over ! ಈ ದೇಶದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸುತ್ತೇವೆಂದು ಹೇಳಿದ್ದೀರಿ. ಇದು ನಿಮ್ಮ ಕೈಯಲ್ಲಿ ಆಗುವುದಿಲ್ಲ ಅಂತ ಸ್ಪಷ್ಟವಾಗಿ ಹೇಳುತ್ತೇನೆ. ಈಗ ಹೆಚ್ಚುವರಿ ಖರ್ಚಿನ ಒಂದು ಅಂದಾಜು ಪಟ್ಟಿಯನ್ನು ತೆಗೆದುಕೊಂಡು ಬಂದಿದ್ದೀರಿ. ಇದನ್ನು ಮಾಡುವಾಗ ನೀವು ಇದನ್ನು ತಡೆಯಬೇಕಾದರೆ ಏನೇನು ಕೆಲಸಕಾರ್ಯಗಳನ್ನು ಮಾಡಬೇಕು, ಯಾವ ರೀತಿ ಹಣಕಾಸಿನ ಬಗ್ಗೆ ಯೋಚನೆ ಮಾಡಬೇಕು ಮಾಡಿದ್ದೀರಾ ? ಇವೊತ್ತು ನೂರಾರು ಟ್ರಾನ್ಸ್‌ಫರ್ಸ್ ಮಾಡಿದ್ದೀರಾ. ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಏಳುನೂರರಿಂದ ಒಂದು ಸಾವಿರದವರೆಗೆ ಟ್ರಾನ್ಸ್‌ಫರ್ ಮಾಡಿದ್ದೀರಾ. ಬೇರೆ ಡಿಪಾರ್ಟ್‌ಮೆಂಟಿನಲ್ಲಿಯೂ ಕೂಡ ಅದೇ ತರಹ ಟ್ರಾನ್ಸ್‌ಫರ್ ಮಾಡಿದ್ದೀರಾ. ಕೆಲವು ಅಧಿಕಾರಿಗಳು ಒಳ್ಳೆಯವರು ಕೆಲವು ಅಧಿಕಾರಿಗಳು ಕೆಟ್ಟವರು ಈ ಭಾವನೆ ಇದೆ ಅಂತ ನಾನು ಹೇಳುತ್ತಿಲ್ಲ. ಆದರೆ ಹಿಂದಿನ ಸರ್ಕಾರದವರು ಉನ್ನತ ಹುದ್ದೆಗಳಲ್ಲಿ ಅನುಭವ ಅಧಿಕಾರಿಗಳನ್ನು ಇಟ್ಟಿದ್ದರು. ಇವೊತ್ತು ಅವರನ್ನೆಲ್ಲಾ ಟ್ರಾನ್ಸ್‌ಫರ್ ಮಾಡಿದ್ದೀರಿ. ಸೀನಿಯರ್ ಅಧಿಕಾರಿಗಳು ಅನುಭವ ಅಧಿಕಾರಿಗಳಾಗಿದ್ದರು. ಅವರನ್ನೆಲ್ಲಾ ಆ ಹುದ್ದೆಗಳಿಂದ ಇನ್ನೊಂದು ಹುದ್ದೆಗೆ ವರ್ಗಮಾಡಿ ಜೂನಿಯರ್ ಅಧಿಕಾರಿಗಳು ಯಾರು ಇದ್ದಾರೆ ಆ ಅಧಿಕಾರಿಗಳ ಜೊತೆಗೆ ಕೆಲಸ ಮಾಡಲಿಕ್ಕೆ ಮಾಡಿದ್ದೀರಿ. ಇವೊತ್ತು ಸೀನಿಯರ್ ಅಧಿಕಾರಿಗಳಿಗೂ ಜೂನಿಯರ್ ಅಧಿಕಾರಿಗಳಿಗೂ ವ್ಯತ್ಯಾಸ ಇಟ್ಟಿಲ್ಲ. ಎಲ್ಲಾ ಇಲಾಖೆಯಲ್ಲಿಯೂ ಈ ರೀತಿ ಮಾಡಿದ್ದೀರಾ. ನಿಮಗೆ ಬೇಕಾಗಿರತಕ್ಕ ಅಧಿಕಾರಿ ಹೆಸರು ಹೇಳಿ ಹೆಚ್ಚು ಅಭಿಮಾನದಿಂದ ಕಾಣುತ್ತಿದ್ದೀರಿ. ಇನ್ನು ಕೆಲವರನ್ನು ನಿಕೃಷ್ಟ ಭಾವನೆಯಿಂದ ಕಾಣತಕ್ಕದ್ದು ಈ ಸರ್ಕಾರಕ್ಕೆ ಸರಿಯಲ್ಲ ಎಂದು ಹೇಳುತ್ತೇನೆ. ಅಧಿಕಾರಿಗಳು ಮಾತ್ರ ಇರಲಿ ಅಥವಾ ಹೋಗಲಿ ಅದರ ಬಗ್ಗೆ ನನ್ನ ಅಭ್ಯಂತರ ಇಲ್ಲ. ಇವತ್ತು ನೀವು ಅಧಿಕಾರಕ್ಕೆ ಬಂದಿರಬಹುದು. ನಾಳೆ ಇನ್ನೊಂದು ಸರ್ಕಾರ ಅಧಿಕಾರಕ್ಕೆ ಬರಬಹುದು. ನಾವು ಅಧಿಕಾರವನ್ನು ಬಿಟ್ಟುಕೊಟ್ಟಿದ್ದಕ್ಕೆ ಇವತ್ತು ನೀವು ಅಧಿಕಾರಕ್ಕೆ ಬಂದಿದ್ದೀರಿ. ಆಗರೆ ಸರ್ಕಾರದಲ್ಲಿ ಅಧಿಕಾರಿಗಳು ಮಾತ್ರ ಇರುತ್ತಾರೆ ಆದ್ದರಿಂದ ನೀವು ಅಧಿಕಾರಕ್ಕೆ ಬಂದ ಮೇಲೆ ಬೇರೆಯವರ ಪ್ರೀತಿಗೆ ಒಳಗಾಗಿದ್ದಾರೆ, ಅಚ್ಚುಮೆಚ್ಚಿಗೆ ಒಳಗಾಗಿದ್ದಾರೆ ಎಂಬುದಾಗಿ ವರ್ಗಾವಣೆ ಮಾಡಿದ್ದೀರಿ. ನಾಳೆ ದಿವಸ ಸರ್ಕಾರ ಬದಲಾವಣೆಯಾಗಿ ಇನ್ನೊಬ್ಬರು ಅಧಿಕಾರಕ್ಕೆ ಬಂದರೆ ಅವರೂ ನೀವು ಮಾಡಿದ್ದನ್ನೇ ಪ್ರಾರಂಭ ಮಾಡಿದರೆ ಅದು ಎಲ್ಲಿಗೆ ಮುಟ್ಟುತ್ತದೆ ? ಸರ್ಕಾರ ಹೇಗೆ ನಡೆಯುತ್ತದೆಂಬುದನ್ನು ದಯಮಾಡಿ ಹೇಳಿ. ಇದು ಸರಿಯಲ್ಲ. ಸಾವಿರಾರು ಅಧಿಕಾರಿಗಳನ್ನು ಒಂದೇ ತಿಂಗಳಲ್ಲಿ ವರ್ಗಾವಣೆ ಮಾಡಿದ್ದೀರಿ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಆ ಅಧಿಕಾರಿಗಳು ವರ್ಗಾವಣೆಯಾದ ಮೇಲೆ ಅವರಿಗೆ ಎಷ್ಟು ಭತ್ಯವನ್ನು ಕೊಡಬೇಕಾಗುತ್ತದೆಂಬುದನ್ನು ನೀವು ತಿಳಿದುಕೊಂಡಿದ್ದೀರಾ ? ವೈದ್ಯಕೀಯ ಇಲಾಖೆಯಲ್ಲಿ ಒಂದು ಸಾವಿರ ಡಾಕ್ಟರ್‌ಗಳನ್ನು ವರ್ಗಾವಣೆ ಮಾಡಿದ್ದೀರಿ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗ ಮಾಡಿ ಅವರು ಆ ಸ್ಥಳಕ್ಕೆ ಹೋಗಬೇಕಾದರೆ ಅವರಿಗೆ ಪ್ರತಿಯೊಬ್ಬರಿಗೂ ಒಂದು ಸಾವಿರ ರೂಪಾಯಿಗಳ ಭತ್ಯವನ್ನು ಕೊಡಬೇಕಾಗುತ್ತದೆ. ಹಣ ಎಷ್ಟು ಆಯಿತು ! ನಿಮಗೆ ಹಣದ ವೆಚ್ಚದ ಮೇಲೆ ಗಮನವೇ ಇಲ್ಲ. ನೀವು ಮಾಡಿರತಕ್ಕಂತಹದ್ದು ಹೇಗೆ ಬೇಕಾದರೂ ಮಾಡಬಹುದು ಎಂಬುದನ್ನು ತಿಳಿಸುತ್ತದೆ. ಆದರೆ ನೀವು ನಾವು ಹಣವನ್ನು ಉಳಿತಾಯ ಮಾಡುತ್ತೇವೆಂದು ಹೇಳುತ್ತಿದ್ದೀರಲ್ಲಾ, ಎಲ್ಲಿ ಹಣವನ್ನು ಉಳಿಸಿದ್ದೀರಿ ಎಂಬುದನ್ನು ದಯಮಾಡಿ ಹೇಳಿ. ಸಂಪತ್ ಅಭಿವೃದ್ಧಿ ಕಾರ್ಯಗಳ ಬಗ್ಗೆ ಖರ್ಚು ಮಾಡಬೇಕೆಂದು ಹೇಳುವುದಕ್ಕೂ ನಿಮಗೆ ಮನಸ್ಸು ಇಲ್ಲ ಎಂಬುದಾಗಿ ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಹಳ್ಳಿಗಳಿಗೆ ಹೋಗಬೇಕು. ಹಳ್ಳಿಗಾಡಿನ ಜನಗಳ ಜೀವನವನ್ನು ನೀವು ನೋಡಿದ್ದೀರಾ ? ನಾನು ನೋಡಿದ್ದೇನೆ. ಹಳ್ಳಿಗಾಡಿನಲ್ಲಿರತಕ್ಕ ಜನರ ಜೀವನದ ಮಟ್ಟವನ್ನು ನೋಡಿದರೆ ಯಾರ ಮನಸ್ಸಿಗಾದರೂ ನೋವಾಗುತ್ತದೆ. ಹಿಂದಿನ ಕಾಲದಿಂದ ಇವತ್ತಿನವರೆಗೂ ಬಹಳ ಜನ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಎಷ್ಟೆಷ್ಟೋ ವಾಗ್ದಾನ ಮಾಡಿದ್ದಾರೆ ಆ ವಾಗ್ದಾನದಂತೆ ನಾವು ಅವರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದು ಆಯಿತು ಆದರೆ ಹಳ್ಳಿಗಳಲ್ಲಿರತಕ್ಕಂತಹ ಜನರ ಜೀವನ ಮಟ್ಟವನ್ನೂ ಮತ್ತು ಪೇಟೆಯಲ್ಲಿರತಕ್ಕಂತಹ ಜನಗಳ ಜೀವನ ಮಟ್ಟವನ್ನೂ ಹೋಲಿಸಿ ನೋಡುವುದಾದರೆ, ಅವರಿಗೂ ಇವರಿಗೂ ಏನೇನೂ ಸಂಬಂಧವೇ ಇಲ್ಲ. ಹಳ್ಳಿಯಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದಾರೆ. ಜೊತೆಗೆ ಅವರಿಗೆ

ಕೆಲಸ ಮಾಡುವುದಕ್ಕೂ ಅವಕಾಶ ಇಲ್ಲ. ಕೆಲಸ ಮಾಡಿದರೂ ಅವರಿಗೆ ಸರಿಯಾದ ಪ್ರತಿಫಲ ಇಲ್ಲ. ಮತ್ತೆ ಅವರು ಸರಿಯಾದ ಜೀವನ ಮಾಡುವುದಕ್ಕೆ ಅವರಿಗೆ ಸರಿಯಾಗಿರತಕ್ಕಂತಹ ಸಂಪತ್ತಿನ ಬೆಂಬಲ ಇಲ್ಲವೇ ಇಲ್ಲ. ಹೀಗಾಗಿ ಹಳ್ಳಿಯಲ್ಲಿರತಕ್ಕಂತಹ ಜನಗಳು ಏನಿದ್ದಾರೆ ಆ ಜನಗಳ ಜೀವನ ಮಟ್ಟ ಬಹಳ ಕನಿಷ್ಠ ಅವಸ್ಥೆಯಲ್ಲಿದೆ. ಜೊತೆಗೆ ಅವರಿಗೆ ಬೇಕಾಗಿರತಕ್ಕಂತಹ ಜೀವಾನವಶ್ಯಕ ವಸ್ತುಗಳ ಬೆಲೆ ಏನಿದೆ, ಅವುಗಳ ಬೆಲೆ ಆಕಾಶಕ್ಕೆ ಮುಟ್ಟಿವೆ. ಮತ್ತೆ ನಾವು ಪ್ರೊಡ್ಯೂಸಿಂಗ್ ಕೆಪಾಸಿಟಿ ಅಂತ ಏನು ಹೇಳುತ್ತಿದ್ದೇವೆ, ಅದು ಮೊದಲು ಹೇಗೆ ಇತ್ತೊ ಈಗಲೂ ಹಾಗೆ ಇದೆ. ಪ್ರೊಡ್ಯೂಸಿಂಗ್ ಕೆಪಾಸಿಟಿ ಇಲ್ಲ ಅಂದ ಮೇಲೆ ಪರ್ಚೇಸಿಂಗ್ ಕೆಪಾಸಿಟಿ ಇಲ್ಲವೇ ಇಲ್ಲ ಆದ್ದರಿಂದ ಈ ವಿಚಾರದಲ್ಲಿ ಒಂದು ಸಾಮರಸ್ಯ ಹಾಗೂ ಸಮಾಧಾನವಾಗಿರತಕ್ಕಂತಹ ನೀತಿಯನ್ನು ನಿರೂಪಿಸಬೇಕಾಗುತ್ತದೆ. ಅದನ್ನು ನೀವು ಅನುಸರಿಸುತ್ತಿಲ್ಲ. ಅವರ ಒಂದು ಪರ್ಚೇಸಿಂಗ್ ಕೆಪಾಸಿಟಿ ಹಾಗೂ ಖರ್ಚು ಮಾಡತಕ್ಕಂತಹ ಶಕ್ತಿ ಏನಿದೆ, ಈ ಒಂದು ಶಕ್ತಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಏನೇನು ಕೆಲಸ ಮಾಡಬೇಕು ? ಎಂದರೆ ಹಳ್ಳಿಯಲ್ಲಿರತಕ್ಕಂತಹ ಜನಗಳ ಜೀವನ ಮಟ್ಟವನ್ನು ಅಭಿವೃದ್ಧಿ ಮಾಡುವುದರ ಕಡೆ ನೀವು ಹೆಚ್ಚು ನಿಗಾವಹಿಸಬೇಕು, ಇಲ್ಲದಿದ್ದರೆ ಹೇಗೆ ?

SRI D. DEVARAJ URS.—This is another way of reducing the consumption.

SRI B. BASAVALINGAPPA —They will starve and die. ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಇದು ಇದೆ. ನಾವೂ ಅಧಿಕಾರದಲ್ಲಿದ್ದೆವು. ನಾವು ಅಧಿಕಾರದಲ್ಲಿರಲಿಲ್ಲ ಅಂತ ಹೇಳುವುದಿಲ್ಲ. ಆದರೆ ನಾವು ಏನು ಹೊಸ ಹೊಸ ಉದ್ದಿಮೆಗಳನ್ನು ಸ್ಥಾಪನ ಮಾಡುವುದಕ್ಕೆ ಅಂದರೆ ಅಲ್ಲಿಂದ ಹಿಡಿದು ಇಲ್ಲಿಯುವರೆಗೂ ಇದನ್ನು ಎಲ್ಲಾ ಕಡೆಗಳಲ್ಲೂ ಅಂದರೆ ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿದೆವು. ಆದರೆ ನೀವು ಹಿಂದಿನವರು ಮಾಡಲಿಲ್ಲ ಅಂತ ನೀವು ಮಾಡುವುದನ್ನು ಬಿಡುವ ಹಾಗೆ ಇಲ್ಲ. ನೀವು ಮಾಡಲೇಬೇಕು. ಏಕೆಂದರೆ ಹಳ್ಳಿಗಾಡಿನ ಜನಗಳ ಬಗ್ಗೆ ಬಹಳವಾಗಿ ಕನಿಕರವನ್ನು ವ್ಯಕ್ತಪಡಿಸಿರತಕ್ಕಂತಹವರು ನೀವು. ಅದರ ಬಗ್ಗೆ ನೀವು ಎಷ್ಟು ಮಾಡಿದ್ದರೋ, ಬಿಟ್ಟಿದ್ದೀರೋ ಅದು ಬೇರೆ ವಿಚಾರ. ಹಿಂದೆ ಕೇಂದ್ರದಲ್ಲಿ ಜನತಾ ಪಾರ್ಟಿಯವರು ಅಧಿಕಾರಕ್ಕೆ ಬಂದರು. ಅವರೂ ಹೀಗೆ ಹೇಳಿದರು. ಹಳ್ಳಿಗಾಡಿನ ಜನರ ಜೀವನ ಮಟ್ಟವನ್ನು ವೃದ್ಧಿಪಡಿಸುತ್ತೇವೆ, ಪಟ್ಟಣದಲ್ಲಿರತಕ್ಕಂತಹ ಜನಗಳ ಆದಾಯ ಏನಿದೆ ಅದನ್ನು ಕಡಿಮೆ ಮಾಡುತ್ತೇವೆ ಎಂಬುದಾಗಿ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಹೇಳಿದರು. ಅವರ ಶಕ್ತ್ಯಾನುಸಾರ ಮಾಡಿದರು ಹೋದರು. ನೀವು ಇವತ್ತು ಜನತಾ ಪಾರ್ಟಿಯವರ ಅಜಾಗರೂಕತೆಯಿಂದ ಈ ದೇಶದ ಹಣಕಾಸಿನ ಸ್ಥಿತಿ ಗತಿಗಳು ಅಧೋಗತಿ ಆಗಿವೆ. ಜನಗಳಿಗೆ ಅನ್ಯಾಯ ಮಾಡಿದ್ದಾರೆ. ಪೇಟೆಗಳ ಜನಗಳಿಗೆ ಅನ್ಯಾಯ ಮಾಡಿದ್ದಾರೆ ಎಸ್. ಸಿ. : ಎಸ್. ಟಿ. ಮತ್ತೆ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಬಹಳ ಅನ್ಯಾಯ ಮಾಡಿದ್ದಾರೆ. ಅವರ ಬಗ್ಗೆ ಏನೂ ಗಮನ ಕೊಡಲಿಲ್ಲ, ಆದ್ದರಿಂದ ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬುದಾಗಿ ಹೇಳಿ, ಜನಗಳ ಮನಸ್ಸನ್ನು ಒಲಿಸಿಕೊಂಡು ಇವತ್ತಿನ ದಿವಸ ನೀವು ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬಂದಿದ್ದೀರಿ. ಜನಗಳು ನಿಮ್ಮ ಮೇಲೆ ನಂಬಿಕೆ ಇಟ್ಟು ಓಟು ಕೊಟ್ಟಿದ್ದಾರೆ. ಜನತೆಯ ಮನಸ್ಸು ಎತ್ತ ಸಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಕಷ್ಟ. ಯಾವಾಗಲೂ ನಿಮ್ಮ ಕಡೇ ಇದ್ದಾರೆ ಎಂಬುದಾಗಿ ತಿಳಿದುಕೊಳ್ಳಬೇಡಿ. ಜನತಾ ಪಾರ್ಟಿಯವರು ಎರಡೂವರೆ ವರ್ಷ ಆಡಳಿತದಲ್ಲಿದ್ದರು. ಅದಕ್ಕಿಂತ ಹಿಂದೆ ನೀವೇ ಅಧಿಕಾರದಲ್ಲಿದ್ದಿರಿ. ಈಗ ಮತ್ತೆ ನೀವೇ ಅಧಿಕಾರಕ್ಕೆ ಬಂದಿದ್ದೀರಿ. ಜನತಾ ಪಾರ್ಟಿಯವರು ಅಧಿಕಾರದಲ್ಲಿದ್ದಂತಹ ಸಮಯದಲ್ಲಿ ಏನೋ ತಪ್ಪು ಮಾಡಿರಬಹುದು. ಆದರೆ ಅದೇ ತಪ್ಪನ್ನು ನೀವೂ ಮಾಡಿದರೆ ಹೇಗೆ ? ಚುನಾವಣೆ ಕಾಲದಲ್ಲಿ ಏನೇನು ಹೇಳಿದ್ದೀರಿ ಎಂಬುದನ್ನು ಒಂದು ಸಾರಿ ಜ್ಞಾಪಕ ಮಾಡಿಕೊಳ್ಳಿ. ಅದನ್ನು ಬಿಟ್ಟು ಬರೀ ಜನತಾ ಪಾರ್ಟಿಯನ್ನು ಬಯ್ಯುವುದರಲ್ಲೇ ಕಾಲ ಕಳೆಯುತ್ತಿದ್ದರೆ, ಜನಗಳಿಗೆ ಇದರಿಂದ ಏನು ಉಪಯೋಗವಾಗುತ್ತದೆ ?

ಶ್ರೀ ಎಚ್. ಡಿ. ದೇವೇಗೌಡ.—ಜನತಾ ಪಾರ್ಟಿಗೆ ಅಧಿಕಾರದಲ್ಲಿದ್ದಂತಹ ಸಮಯದಲ್ಲಿ ಏನೇನು ತಪ್ಪು ಮಾಡಿದ್ದಾರೆ ಎಂಬುದನ್ನು ದಯಮಾಡಿ ಪಟ್ಟಿಮಾಡಿ ಹೇಳಿ.

ಶ್ರೀ ಡಿ. ದೇವರಾಜ ಅರಸು.—ಅವರು ಜನತಾ ಪಾರ್ಟಿಯನ್ನು ಬೈದಿಲ್ಲ. ನಾನು ತಿಳಿದ ಹಾಗೆ ಜನತಾ ಪಾರ್ಟಿಯನ್ನು ಬಯ್ಯುತ್ತಿರುವವರು ಬೇರೆಯವರು. ಅದನ್ನು ನಮ್ಮ ಮಾನ್ಯ ಬಸವಲಿಂಗಪ್ಪನವರು ಹೇಳದೆ ಪಾಪ ಮೊಯ್ಲಿಯವರ ಮೇಲೆ ಒತ್ತಡ ತಂದರೆ ಅವರು ಏನು ಹೇಳುತ್ತಾರೆ. ಜನತಾ ಪಾರ್ಟಿ ಹಾಗೆ ಮಾಡಿತು, ಹೀಗೆ ಮಾಡಿತು, ಈ ದೇಶದಲ್ಲಿ ಜನತಾ ಪಾರ್ಟಿಯು ಎರಡೂವರೆ ವರ್ಷದ ಆಡಳಿತದಲ್ಲಿ ಎಲ್ಲಾ ಹಾಳಾದವು ಅಂತ ಹೇಳುತ್ತಿರುವವರು ಶ್ರೀಮತಿ ಇಂದಿರಾಗಾಂಧಿಯವರು. ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದಕ್ಕೆ ಶ್ರೀಮಾನ್ ಮೊಯ್ಲಿಯವರನ್ನು ಕೇಳಿದರೆ ಹೇಗೆ. ಅದಕ್ಕೆ ಇವರು ಏನು ಮಾಡುವುದಕ್ಕಾಗುತ್ತದೆ. ಕೈಗಾರಿಕೆಗಳ ವಿಚಾರದಲ್ಲಿ ಹೇಳುವುದಾದರೆ ಜನತಾ ಪಾರ್ಟಿಯವರು ಏನೂ ಮಾಡಲಿಲ್ಲ. ಅಂತ ಹೇಳುವುದಕ್ಕಾಗುವುದಿಲ್ಲ. ಕೈಗಾರಿಕೆಗಳ ವಿಚಾರದಲ್ಲಿ ಹೇಳುವುದಾದರೆ During Janatha Government, they wanted to decentralise the industries and they consitituted certain Experts Committees at the District level. ಅಂತ ಏನು ಮಾಡಿದ್ದರು ಅದನ್ನು ಈಗ ರಿವರ್ಸ್ ಮಾಡುವುದಕ್ಕೆ ಹೊರಟಿದ್ದಾರೆ. ನಾಳೆ ಎಲ್ಲ ಕೈಗಾರಿಕೆಗಳ ಸೆಂಟ್ರಲೈಸ್ ಬರುತ್ತದೆ. ಆಗ ಯಾರಾದರೊಬ್ಬ ಎಂತಹ ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕಾದರೂ ಒಬ್ಬರ ಮುಖೇನ ಹೋಗಬೇಕು ಅಂತಹ ಪರಿಸ್ಥಿತಿ ಬರುತ್ತದೆ. They want to centralise the industrial policy at the State level.

ಶ್ರೀ ಎಂ. ವೀರಪ್ಪ ಮೊಯ್ಲಿ.—ಶ್ರೀಮಾನ್ ಬಸವಲಿಂಗಪ್ಪನವರು ಎಂತಹವರು ಎಂಬುದು ಈ ರಾಜ್ಯದಲ್ಲಿರುವ ಎಲ್ಲರಿಗೂ ಗೊತ್ತು. ಆದರೆ ಅವರು ಹೇಳುವಾಗ ಒಂದು ಗಾದೆಯನ್ನೂ ಮರೆತಿದ್ದಾರೆ. ಅದೇನೆಂದರೆ, 'ಕುಂಬಾರನಿಗೆ ಒಂದು ವರುಷ ಆದರೆ ದೊಣ್ಣೆಗೆ ಒಂದು ನಿಮಿಷ' ಎಂಬ ಗಾದೆಯಂತೆ ನೂರು ವರ್ಷದಲ್ಲಿ ಆಗದೇ ಇದ್ದುದನ್ನು ಒಂದೇ ವರ್ಷದಲ್ಲೂ ಮಾಡುವುದಕ್ಕೆ ಸಾಧ್ಯ ಇದೆ. ಅಷ್ಟು ಏನೂ ಕಷ್ಟ ಇಲ್ಲ. ತಾವಿಬ್ಬರೂ ಕೂಡ ಮೊನ್ನೆ ಮೊನ್ನೆವರೆಗೆ ಅವರ ಜೊತೆಯಲ್ಲಿದ್ದೀರಲ್ಲಾ, ಆಗ ಬದಲಾವಣೆ ಮಾಡಬಹುದಿತ್ತಲ್ಲ. ನೀವು ಮಾಡಲಿಲ್ಲ. ಮುಂದೆ ಮಾಡಬಹುದು. ಆದ್ದರಿಂದ ಚರ್ಚೆಗೆ ಅನುಕೂಲವಾಗಬೇಕು. ಮತ್ತೆ ನಾವು ಮುಂದೆ ಕೈಗಾರಿಕೆಯನ್ನು ಸೆಂಟ್ರಲೈಸ್ ಮಾಡುತ್ತೇವೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅದನ್ನು ಮುಂದೆ ನಾವು ಡಿ.ಸೆಂಟ್ರಲೈಸ್ ಮಾಡುತ್ತೇವೆಯೋ ಅಥವಾ ಸೆಂಟ್ರಲೈಸ್ ಮಾಡುತ್ತೇವೆಯೋ ಎಂಬುದನ್ನು ಮುಂದೆ ಕಾಣಬಹುದಲ್ಲಾ; The District Industries Centres are not abolished. They are still existing. ಒಂದು ಸಂಸ್ಥೆ ಪ್ರಾರಂಭವಾದಮೇಲೆ ಅದು ಪ್ರಾರಂಭವಾಯಿತೆಂದು ಹೇಳಿ ಸುಮ್ಮನೆ ಇರುವುದಿಲ್ಲ. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್ ಆಗಿಲ್ಲವೆಂದು ಎಲ್ಲಾ ಕಡೆ ಕೂಗು ಇತ್ತು. ಈ ಸೆಂಟರ್ಸ್ ಬಗ್ಗೆ ಒಂದಷ್ಟು ಅಧಿಕಾರಿಗಳನ್ನು ಹಾಕಿದಮೇಲೆ ಎಲ್ಲಾ ಕೆಲಸ ಡೀಸೆಂಟ್ರಲೈಸ್ ಆಗಿಲ್ಲ. ಪರ್‌ಫಾರ್ಮೆನ್ಸ್ ವೈಸ್ ಆಗಿಲ್ಲವೆಂದು ಹೇಳಿ ಎಲ್ಲಾ ಕಡೆಯೂ ಕ್ರಿಟಿಸಿಸಂ ಬಂತು. ಆದ್ದರಿಂದ ರೀಸ್ಟ್ರಕ್ಚರ್ ಬಗ್ಗೆ ವಿಚಾರ ಮಾಡುವುದಕ್ಕಾಗಿ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—Let him understand properly. What I said is that there is already a thinking at the central level to centralize. ಪಾಪ ಇದು ಅವರಿಗೆ ಗೊತ್ತಿಲ್ಲ. ಇದು ನನಗೆ ಗೊತ್ತು. ಏನು ಜನತಾ ಸರ್ಕಾರದವರು ಮಾಡಿದ್ದರೋ ಅದನ್ನು ಕೇಂದ್ರೀಕೃತ ಮಾಡಬೇಕೆನ್ನುವ ತಿಂಕಿಂಗ್ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ದಯಮಾಡಿ ಓದಿ. ಇನ್ನು 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬ ಗಾದೆಯನ್ನು ಹೇಳಿದರು. ಹಾಗಾದರೆ, ಇವರ ಲೆಕ್ಕದಲ್ಲೇ ತೆಗೆದುಕೊಳ್ಳುವುದಾದರೆ ಜನತಾ ಪಕ್ಷದವರು ಎರಡೂವರೆ ವರ್ಷದಲ್ಲಿ ಎಲ್ಲವನ್ನೂ ಒಡೆದುಹಾಕಿದರೆ. ಇವರೂ ಎಲ್ಲವನ್ನೂ ಆರು ತಿಂಗಳುಗಳಲ್ಲಿ ಒಡೆದು ಹಾಕುತ್ತಾರೆಂದು ಹೇಳಬೇಕಾಗುತ್ತದೆ. ಹಿಂದೆ ಮಾಡಿರುವುದನ್ನೆಲ್ಲಾ ನೀವು ೬ ತಿಂಗಳಲ್ಲೇ ಮುಗಿಸುತ್ತೀರೆಂದು ಹೇಳಬೇಕಾಗುತ್ತದೆ. ನಿಮ್ಮ ಗಾದೆಯಿಂದಲೇ ನಾನು ಅದನ್ನು ಹೇಳಿದೆ, ಇಲ್ಲದಿದ್ದರೆ ಹೇಳುತ್ತಿರಲಿಲ್ಲ. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ, ನಿಮಗೆ ಆರು ತಿಂಗಳು ಸಾಕು.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ನಾವು ಆಯವ್ಯಯದ ಮೇಲೆ ಚರ್ಚೆಯನ್ನು ಮಾಡುತ್ತಿದ್ದೇವೆ. ಇದರ ವ್ಯಾಪ್ತಿಯನ್ನು ನಾನು ಅಲ್ಪಸ್ವಲ್ಪ ತಿಳಿದುಕೊಂಡಿದ್ದೇನೆ. ರಸ್ತೆ ಕೆರೆಗಳ ಬಗ್ಗೆ ಡಿಮ್ಯಾಂಡ್ ಬಗ್ಗೆ ಚರ್ಚೆ ಬಂದಾಗ ಮಾತನಾಡೋಣ. ನಾನು ಇಲ್ಲಿ ಆರೋಗ್ಯಕರವಾದ ಚರ್ಚೆ ಆಗ ಬೇಕೆಂದು ತಿಳಿದುಕೊಂಡಿದ್ದೇನೆ. ರಾಷ್ಟ್ರದ ಆರ್ಥಿಕ ಬೆಳವಣಿಗೆ ಅಥವಾ ಉತ್ಪಾದನಾ

ಬೆಳವಣಿಗೆಗಾಗಲೀ ಕುಂಟಿತವಾಗುವುದಕ್ಕೆ, ಕೈಗಾರಿಕಾ ಬೆಳವಣಿಗೆ ಹಾಗೂ ಆಹಾರದ ಉತ್ಪಾದನೆಯ ಬೆಳವಣಿಗೆಗೆ ಎರಡೂವರೆ ವರ್ಷ ಇದ್ದಂತಹ ಜನತಾ ಸರ್ಕಾರ ಯಾವ ಯಾವ ರಂಗದಲ್ಲಿ ಅವರ ತಪ್ಪು ನಡುವಳಿಕೆಯಿಂದ ರಾಷ್ಟ್ರದ ಪ್ರಗತಿಗೆ ಒಂದು ಕುಂಟಿತರಾಗಿದ್ದರು. ಏನು ೨೮-೩೦ ವರ್ಷಗಳಲ್ಲಿ ನಿಮ್ಮ ಸಾಧನೆಗಳು ಆಗಿದ್ದವು ಅವುಗಳು ಕುಂಟಿತಗೊಳ್ಳಲು ಜನತಾ ಸರ್ಕಾರ ಹೇಗೆ ಕಾರಣ ಎನ್ನುವುದರ ಬಗ್ಗೆ ತಾವು ಏನಾದರೂ ಅಂಕಿಅಂಶಗಳನ್ನು ಒದಗಿಸಿಕೊಟ್ಟು ಮಾತನಾಡುವುದಾದರೆ ಚರ್ಚೆ ಫಲಪ್ರದವಾಗುವುದಕ್ಕೆ ಅವಕಾಶವಾಗುತ್ತದೆ. ೨೦-೩೦ ವರ್ಷಗಳ ಆಳ್ವಿಕೆಯಲ್ಲಿ ಷಾ ಆಯೋಗ ಗ್ರೋವರ್ ಕಮಿಷನ್, ವೈದ್ಯಲಿಂಗಮ್ ಆಯೋಗ ಬಂದವು. ಈ ಬಗ್ಗೆ ನಾನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. If the Government has got some concrete evidence and statistics, let it place the same before the House. ಅದು ಇಲ್ಲದೇ ನಮ್ಮ ಮೇಲೆ ನೀವು, ನಿಮ್ಮ ಮೇಲೆ ನಾವು ಮಾತನಾಡುತ್ತಾ ಹೋಗುವುದು ತಪ್ಪುವುದಿಲ್ಲ,

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಏನು ಹೇಳಿವರು ಅದು ನನ್ನ ಮನಸ್ಸಿನಲ್ಲಿಯೂ ಇತ್ತು. ಅದನ್ನು ನಾನು ಹೇಳಲಾರದೇ ಇದ್ದೆ, ಆದರೆ ಅದನ್ನು ವಿರೋಧ ಪಕ್ಷದ ನಾಯಕರು ಹೇಳಿದರು ಅಷ್ಟೇ ಈಗ ಇವರ ಅರ್ಥ ಏನೆಂದರೆ, ಶ್ರೀಮಾನ್ ಮೊಯಿಲಿಯವರು ಇದ್ದಾರಲ್ಲಾ ಅವರು ಕೈಗೊಂಬೆ ಮಾತ್ರ, ಅವರಿಗೆ ಏನೂ ಸ್ವಂತ ಕಾರ್ಯಗಳನ್ನು ಮಾಡತಕ್ಕ ಹಿಡಿತ ವಾಗಲೀ...

ಶ್ರೀ ಎಂ. ವೀರಪ್ಪ ಮೊಯ್ಲಿ.— ನಿಮ್ಮ ಹಾಗೆ ಕೈಗೊಂಬೆಯಲ್ಲ. ಬೇರೆಯವರ ಮಾತಿನಲ್ಲಿ ಬಂದರೆ, ಯಾರೇ ಆಗಲಿ ಸ್ವಲ್ಪ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ತಮ್ಮ ವಿಷಯಕ್ಕೆ ಬಂದರೆ, ಪ್ರಪಂಚದಲ್ಲಿ ಎಲ್ಲರಿಗೂ ಗೊತ್ತು. I nevar wanted to cast aspersions.

ಶ್ರೀ ಬಿ. ಬಸವಲಿಂಗಪ್ಪ.—ಜನತಾ ಪಾರ್ಟಿಯವರು ಹೇಗೆ ಹೊಣೆಯನ್ನು ಹೊತ್ತುಕೊಂಡು ಆಡಳಿತವನ್ನು ನಡೆಸಿಕೊಂಡು ಬಂದುದರ ಬಗ್ಗೆ ನಾನು ಹೇಳಿದ್ದು. ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ. ನಿಮಗೆ ಜವಾಬ್ದಾರಿ ಹೆಚ್ಚು ಇದೆ. ನೀವು ಏನು ಜನತೆಗೆ ವಾಗ್ದಾನಗಳನ್ನು ಮಾಡಿದ್ದೀರಿ, ಆ ವಾಗ್ದಾನಗಳ ಪ್ರಕಾರ ಯೋಜನೆಗಳನ್ನು ಹಾಕಿಕೊಂಡು ಜನತೆಯ ಸೇವೆಯನ್ನು ಮಾಡಿ. ಹಾಗೆ ನೀವು ಮಾಡುತ್ತಾ ಇಲ್ಲ. ಇದಕ್ಕೆ ಕಾರಣ ಏನೆಂದರೆ, ನೀವು ಡೆಲ್ಲಿಯಿಂದ ಏನು ಡೈರೆಕ್ಷನ್ ಬರುತ್ತದೆ ಅದೇ ರೀತಿ ಮಾಡಬೇಕಲ್ಲ. ಅದರ ವಿರುದ್ಧವಾಗಿ ನೀವು ಹೋಗುವಹಾಗಿಲ್ಲ. ನಿಮಗೆ ಆ ಸ್ವಾತಂತ್ರ್ಯ ಇಲ್ಲ. ನೀವು ಯಾವುದರಲ್ಲಿ ಸ್ವತಂತ್ರರು ಎಂಬುದನ್ನು ಹೇಳಿ. ರಾಜಕೀಯದಲ್ಲಿ ಸ್ವತಂತ್ರರಾಗಿದ್ದೀರಾ ? ಈ ಒಂದು ಹಣಕಾಸಿನ ವಿಚಾರದಲ್ಲಿ ಸ್ವತಂತ್ರರಾಗಿದ್ದೀರಾ ? ಮಂತ್ರಿ ಪದವಿಯಲ್ಲಿ ನೀವು ಸ್ವತಂತ್ರರಾಗಿದ್ದೀರಾ ? ಸರ್ಕಾರವನ್ನು ನಡೆಸುವುದರಲ್ಲಿ ಸ್ವತಂತ್ರ ಮಂತ್ರಿಗಳಾಗಿದ್ದೀರಾ ? ಅದಕ್ಕೇ ನಾನು ಹೇಳಿದ್ದು ; ಏನೂ ಮಾಡಬೇಕಾದರೂ ಕೂಡ ನಿಮ್ಮ ಸೂತ್ರದ ದಾರವನ್ನು ಮೇಲೆ ಒಬ್ಬರ ಹಿಡಿದುಕೊಂಡಿದ್ದಾರೆ. ಆ ಸೂತ್ರದ ದಾರವನ್ನು ಹಿಡಿದವರು ಕುಣಿಸುವ ಬೊಂಬೆಗಳು ನೀವು. ದಾರವನ್ನು ಹಿಡಿದು ಬೊಂಬೆ ಆಟವನ್ನು ಆಡಿಸುವ ಸೂತ್ರದಾರಿ ಡೆಲ್ಲಿಯಲ್ಲಿದ್ದಾರೆ. ಈಗ ಆ ಸೂತ್ರವನ್ನು ಹಿಡಿದಿರುವವರು ಸ್ವಲ್ಪ ಜವಾಬ್ದಾರಿಯಿಂದಾಗಿ ವರ್ತವಣೆಯಾಗಿರಬಹುದೆಂದು ಕಾಣುತ್ತದೆ. ಅವರು ಹೇಗೆ ಆಡಿಸುತ್ತಿದ್ದಾರೋ ಆ ರೀತಿ ತಾವು ಕುಣಿಯುತ್ತಿದ್ದೀರಿ ತಾವು ಅರ್ಥ ಮಂತ್ರಿಗಳಾಗಿರಬಹುದು. ಶ್ರೀ ವೈ. ರಾಮಕೃಷ್ಣ ಅವರು ಕಾನೂನು ಮಂತ್ರಿಗಳಾಗಿರಬಹುದು, ಆದರೆ ಎಲ್ಲರ ಸೂತ್ರವೂ ಮೇಲೆ ಇದೆ. ಆದ್ದರಿಂದಲೇ ಕೈಗೊಂಬೆಗಳಾಗಿದ್ದೀರೆಂದು ಹೇಳಿದೆ. ಆದ್ದರಿಂದ ತಾವು ದಯಮಾಡಿ ಏನೂ ತಿಳಿದುಕೊಳ್ಳಬೇಡಿ. ಆದುದರಿಂದ ಜನತಾ ಪಾರ್ಟಿಯವರನ್ನು ಬೈದು ಪ್ರಯೋಜನವಿಲ್ಲ. ನೀವು ಜನತೆಗೆ ಏನೂ ಆಶ್ವಾಸನೆಗಳನ್ನು ಕೊಟ್ಟಿದ್ದೀರಿ ಆ ಬಗ್ಗೆ ಆರ್ಥಿಕ ವ್ಯವಸ್ಥೆ ಹಾಗೂ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಮತ್ತೆ ಏನೂ ನಿಮ್ಮ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ. Once Dr. Babasaheb Ambedkar said, "W have achiev d political freedom for this country, but we have still to achieve the econ mic and social freedom for this country" ಎಂದು ಹೇಳಿದ್ದಾರೆ. ಇದನ್ನು ನೀವು ಗಮನದಲ್ಲಿ ಇಟ್ಟುಕೊಳ್ಳಬೇಕು. ಅದನ್ನು ಗಮನದಲ್ಲಿ ಇಟ್ಟುಕೊಂಡು What are the socio-economic programmes to provide social and economic freedom ? ಏನೇನು ಮಾಡಿದ್ದೀರಿ ಸ್ವಾಮಿ ನೀವು ? ಆಯವ್ಯಯದಲ್ಲಿ ಏನೇನು ಮಾಡಿದ್ದೀರಿ ಎಂಬುದನ್ನು

ಶ್ರೀಮಾನ್ ಮೊಯಿಲಿಯವರೇ ಹೇಳಿ ಸ್ವಾಮಿ ? ಬಡಜನರಿಗೋಸ್ಕರ ಏನ್ನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ಬಡಜನರ ಉದ್ಧಾರಕ್ಕೆ ಏನು ಬೇಕಾದರೂ ಖರ್ಚು ಮಾಡಿ ಏನೂ ಮಾಡದೇ ಹಿಂದಿನವರು ದುರುಪಯೋಗ ಮಾಡಿದ್ದಾರೆಂದರೆ, ನೀವು ಏನು ಮಾಡಿದ್ದೀರೆಂದು ಹೇಳಿ. ನಾವು ಹಿಂದೆ ಮಾಡಿದಂತಹ ಒಳ್ಳೆಯ ಕಾರ್ಯಕ್ರಮಗಳನ್ನು ನೀವು ಮುಂದುವರೆಸಿಕೊಂಡು ಹೋಗಿಲ್ಲ ನಾವು ಏನೇನು ಮಾಡಿದೆವೋ ಅವುಗಳನ್ನು ನೀವು ಮುಂದುವರೆಸಿಕೊಂಡು ಬರುತ್ತಾ ಇಲ್ಲ. ನೀವು ಮುಂದು ವರಿಸುವುದಿಲ್ಲ. ಹಾಗಾದರೆ ನೀವು ಮಾಡುವುದು ಏನು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮುಂದುವರೆಸಿದೇ ಬಿಟ್ಟಿರುವ ಕಾರ್ಯಕ್ರಮಗಳು ಯಾವುವು ? Let the debate b e meaningful. ಮಾನ್ಯ ದೇವೇಗೌಡರು ಜನತಾ ಪಕ್ಷದ ವಿಷಯವಾಗಿ ಮಾತನಾಡುತ್ತಾ ತಮ್ಮ ಪಕ್ಷ ಮಾಡದೇ ಬಿಟ್ಟ ಕಾರ್ಯಕ್ರಮಗಳೇನೆಂದು ಕೇಳಿದರು. The senior Member can guide us. That would be more meaningful then coming to a general conclusion.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಯಾಕೋ ನಿನ್ನೆ ಸುಮ್ಮನೆ ಕುಳಿತಿದ್ದರು. ಇವತ್ತು ಸ್ವಲ್ಪ ಆಕ್ಟೀವ್ ಆಗಿ ಇದ್ದಾರೆ, ನೀವು ಏನೇನನ್ನು ಅರ್ಥಕ್ಕೆ ನಿಲ್ಲಿಸಿದ್ದೀರೆಂದು ಕೇಳುತ್ತಿದ್ದೀರಿ. ನೀವು ಮಾಡಿಲ್ಲವೆಂದು ನಾವು ಹೇಳುತ್ತಿದ್ದೇವೆ ನೀವು ಎಲ್ಲವನ್ನೂ ಅರ್ಧಂಭರ್ಧ ಮಾಡಿದ್ದೀರಿ ನೀವು ಮನಸ್ಸಿಲ್ಲದೆ, ಹೃದಯದಲ್ಲಿ ಆಸಕ್ತಿ ಇಲ್ಲದೆ ಆ ರೀತಿ ಮಾಡಿಕೊಂಡು ಹೋಗಬಹುದೆಂದು ಹೊರಟಿದ್ದೀರಿ. ಕಾರಣ ಇವತ್ತು ನಿಮ್ಮ ಆರ್ಥಿಕ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ೨೦ ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಯಾತಕ್ಕೆ ಕೊಟ್ಟರು ? ಇದು ಇಲ್ಲದೇ ಹೋದರೆ ನಿಮಗೆ ಸಂಬಳ ಸಿಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ೨೦ ಕೋಟಿ ರೂಪಾಯಿಗಳನ್ನು ತಂದು ಹಾಕಿದರು. ಎಕನಾಮಿಕ್ ಸರ್ವೆ ಪಬ್ಲಿಷ್ ಮಾಡಿದ್ದೀರಿ. ದಯಮಾಡಿ ಇವನ್ನು ಕೂಲಂಕಷವಾಗಿ ಓದಿ. ಶ್ರೀ ಆರ್. ವೆಂಕಟ್‌ರಾಮನ್ ಅವರು ಕೊಟ್ಟಿರುವುದನ್ನು ದಯಮಾಡಿ ನೋಡಿ. ಅವರು ಏನು ಹೇಳುತ್ತಿದ್ದಾರೆ ? ನೀವು ಬಹಳ ಚಿಂತಾಜನಕ ಸ್ಥಿತಿಯಲ್ಲಿದ್ದೀರೆಂದು ಹೇಳುತ್ತಿದ್ದಾರೆ. ನೀವು ಸರಿಯಾಗಿದೆಯೆಂದು ಹೇಳುತ್ತಿದ್ದೀರಿ.

೫-೦೦ ಪಿ.ಎಂ.

ನೀವು ಬೋಗಸ್ ಬಡ್ಜೆಟ್ ಮಾಡುವಾಗ ಅದನ್ನು ಯಾವ ರೀತಿ ಸರಿದೂಗಿಸಬೇಕು ಎನ್ನುವುದನ್ನು ಯೋಚನೆ ಮಾಡದೆ ಹೋದರೆ, ಯಾರೋ ಹೇಳಿದರು ಯಾರೋ ಕೊಟ್ಟರು, ಆದ್ದರಿಂದ ನಾವು ಕೊಡುತ್ತೇವೆಂದು ೬.೭ ಕೋಟಿ ನೌಕರರಿಗೆ ಜಾಸ್ತಿ ಕೊಡುತ್ತೇವೆಂದು ಹೇಳಿದರೆ, ತಾವು ಯಾವ ಆಧಾರದ ಮೇಲೆ ಕೊಡುತ್ತೀರಿ. ಅದಕ್ಕೆ ಏನು ಆಧಾರವೆಂದು ಕೇಳಿದರೆ ಲಿವಿಂಗ್ ಇಂಡೆಕ್ಸ್ ಎಂದು ಹೇಳುತ್ತೀರಿ. ಇದಕ್ಕೆ ನಮ್ಮ ವಾದ ಏನೆಂದರೆ ಈ Review committee of the index in our own state ಮಾಡದೆ ದಿಲ್ಲಿಯಲ್ಲಿ ಇಂತಕ್ಕಂಥ ಕಮಿಟಿಯವರು ಫಿಕ್ಸ್ ಮಾಡಿರುತ್ತಾರೆ. ಅದರಂತೆ ಅನುಸರಿಸುತ್ತೇವೆಂದು ಹೇಳತಕ್ಕಂಥಾದ್ದು ಸರಿಯಲ್ಲ. ನಮ್ಮ ಕರ್ನಾಟಕದಲ್ಲಿ ಜೀವನ ಮಟ್ಟ ಯಾವ ಪ್ರಮಾಣದಲ್ಲಿದೆ, ಅವಶ್ಯಕ ಪದಾರ್ಥಗಳ ಬೆಲೆ ಏನು ಏರುತ್ತಿದೆ ಅದನ್ನು ನಿಯಂತ್ರಿಸಿ ಜನರಿಗೆ ಒದಗಿಸುವಂಥ ಪ್ರಯತ್ನ ಮಾಡಬೇಕು. ನೀವು ಬೆಲೆಗಳನ್ನು ಏರಿಸಿಕೊಂಡು, ಏರಿಸಿಕೊಂಡು ಹೋಗಿ ನಿಮ್ಮ ಬಡ್ಜೆಟ್‌ನಲ್ಲಿರತಕ್ಕಂಥ ಆದಾಯದಲ್ಲಿ ಅವರಿಗೆ ಪಾಲು ಕೊಟ್ಟುಬಿಟ್ಟರೆ ಜನರಿಗೆ ಏನು ಖರ್ಚು ಮಾಡುತ್ತೀರಿ, ದಯವಿಟ್ಟು ಅದನ್ನು ಹೇಳಿ. ಅದಕ್ಕಾಗಿ ಒಂದು ಸಮಿತಿಯನ್ನು ಮಾಡಿ ಇಂಡಿಯಾ ಸರ್ಕಾರದವರು ಇನ್ನೂ ಮಾಡಿಲ್ಲ. ಈಗಲಾದರೂ ಮಾಡಿ ಸಮಿತಿಯು ಶಿಫಾರಸು ಮಾಡಿದ್ದನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿ. ಹಾಗೆ ಮಾಡದೆ ಆ ವರದಿಯ ಪ್ರಕಾರ ಮಾಡಿಬಿಡುತ್ತೇವೆಂದು ಹೇಳಿದರೆ ಒಂದು ವಾದ ಉದ್ಭವವಾಗುತ್ತದೆ ಅದು ಏನೆಂದರೆ ಅವಶ್ಯಕ ಪದಾರ್ಥಗಳ ಬೆಲೆ ಜಾಸ್ತಿಯಾದಾಗ ಸಂಬಳ ಜಾಸ್ತಿ ಕೊಡದೆ ಹೋದರೆ ಹೇಗೆ ಎನ್ನುವ ಪ್ರಶ್ನೆ ಬರುತ್ತದೆ. ಲಿವಿಂಗ್ ಇಂಡೆಕ್ಸ್ ಎವಾಲ್ಯುವೇಟ್ ಮಾಡಿ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಿ ಅದನ್ನು ಬಿಟ್ಟು ಇಬ್ರಾಹಿಂ ಸಾಹೇಬರು ಪಿ.ಡಿ. ಆಕ್ಟ್ ಅಪ್ಲೈ ಮಾಡುತ್ತೇವೆ ಹುಷಾರಾಗಿರಿ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಪಿ. ಡಿ. ಆಕ್ಟ್ ಜಾರಿಗೊಳಿಸುತ್ತೇವೆ ಹುಷಾರಾಗಿರಿ ಎಂದು ಜನರಿಗೆ ಹೇಳಿಕೊಂಡು ಬರುತ್ತಿರುವುದರ ಅರ್ಥವಾದರೂ ಏನು ಕಾನೂನು ಕೈಗೆ ಕೊಟ್ಟಿದ್ದೇವೆ. ಅದನ್ನು ಜಾರಿಗೊಳಿಸದೆ ಯಾರ ಹತ್ತಿರವೋ

ಹೋಗಿ ಬಿಟ್ಟು ಕಾನೂನು ಜಾರಿಗೆ ಕೊಡುತ್ತೇವೆ ಹುಷಾರಾಗಿರಿ ಎಂದು ಹೇಳಿಕೊಂಡು ಬರತಕ್ಕಂಥದ್ದು ಇದೇ ನಿಮ್ಮ ಸರ್ಕಾರದ ವೈಖರಿ ಎಂದು ಕೇಳುತ್ತೇನೆ. ಆದ್ದರಿಂದ ದಯವಿಟ್ಟು ನಿಮ್ಮ ವೈಖರಿಯನ್ನು ಬದಲಾವಣೆ ಮಾಡಿಕೊಂಡು ಬನ್ನಿ. ಹಿಂದೆ ನಾವು ಪ್ರಯತ್ನ ಮಾಡಿದ್ದೇವೆ. ನಮ್ಮ ಮೇಲೆ ಹೇಳಬೇಡಿ ನಾವು ಮಾಡಿರುವುದರಿಂದಲೇ ರಾಜಿನಾಮೆ ಕೊಟ್ಟು ಬಂದಿರುವುದು. ಜನತಾ ಪಕ್ಷದವರ ಮೇಲೆ ಹೇಳಬೇಡಿ ಅವರೂ ಹೋಗಿ ಬಿಟ್ಟಿದ್ದಾರೆ. ನಿಮಗೆ ಅಧಿಕಾರ ಕೊಟ್ಟಿದ್ದೇವೆ. ಮತ್ತು ನೀವು ಯಾವ ರೀತಿ ಸಾಲ ತೀರಿಸಬೇಕು ಎನ್ನುವುದನ್ನು ಯೋಚನೆ ಮಾಡಿ. ರಿಕವರಿ ಮಾಡಿಬಿಟ್ಟು ಓವರ್ ಡ್ರಾಫ್ಟ್ ತೆಗೆದುಕೊಳ್ಳುತ್ತೀರ. ಯಾವ ರೀತಿ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ತಿಳಿಸಿ.

ಶ್ರೀ ಎಚ್ ಡಿ. ದೇವೇಗೌಡ.—ನಿಮಗೆ ಏನು ಆಗಿದೆ ಎಂದರೆ ಜನತಾ ಪಾರ್ಟಿಯವರು ಅಧಿಕಾರದಲ್ಲಿ ಕೇಂದ್ರದಲ್ಲಿಯೂ ಇಲ್ಲ, ಇಲ್ಲೂ ಇಲ್ಲ. ಇಲ್ಲಿ ಒಂದು ಹತ್ತು ಜನ ಕುಳಿತಿದ್ದಾರೆ. ಅವರಿಗೆ ಶಕ್ತಿ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಸಮಯದಲ್ಲಿ ಕೇಳುವುದೇನೆಂದರೆ ಜನತಾ ಪಕ್ಷದವರು ಅಧಿಕಾರದಲ್ಲಿದ್ದಾಗ ಮನಿ ಸರ್ಕುಲೇಷನ್‌ಗೆ ಏನು ಮಾಡಿದರು. ಫೈನಾನ್ಷಿಯಲ್ ಡಿಸಿಪ್ಲಿನ್ ಏನು ಇದೆ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡು, ಅದರಿಂದ ಫೈನಾನ್ಷಿಯಲ್ ಇನ್‌ಫ್ಲೇಷನ್ ಜಾಸ್ತಿಯಾಯಿತು ಪ್ರೈಸ್ ಸ್ಟ್ರಕ್ಚರ್ ಜಾಸ್ತಿಯಾಯಿತು ಎಂದು ಹೇಳುವುದಾದರೆ ಜನತಾ ಪಕ್ಷದವರು ಈ ಸದನದಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಚರ್ಚೆ ಸರಿಯಾದ ರೀತಿಯಲ್ಲಿ ಆಗಬೇಕಾದರೆ ಫೈನಾನ್ಷಿಯಲ್ ಪಾಲಿಸಿ ಇಂಥಿಂಥಾವುಗಳಲ್ಲಿ ಅಕ್ರಮವಾಗಿದೆ, ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಅಕ್ರಮ ವ್ಯವಸಾಯ ಉತ್ಪಾದನೆಯಲ್ಲಿ ಈ ರೀತಿ ಧಕ್ಕೆಯುಂಟಾಗಿದೆ ಎಂದು ತೋರಿಸಿದರೆ ನಿಮ್ಮ ಸರ್ಕಾರದವರು ಈ ರೀತಿ ಹೇಳುವುದಕ್ಕೆ ಅರ್ಹರು, ಅರ್ಹರಲ್ಲ ಎನುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ಜನತಾ ಪಾರ್ಟಿಯವರ ಕಡೆ ಕೈ ತೋರಿಸಿದರೆ ಏನು ಪ್ರಯೋಜ.

ವೈಸ್ ಛೇರಮನ್.—ಈ ವಿಷಯವನ್ನು ಬಸವಲಿಂಗಪ್ಪನವರಿಗೆ ಹೇಳುತ್ತಿದ್ದೀರಾ, ಅಥವಾ ಅವರಿಗೆ ಹೇಳುತ್ತಿದ್ದೀರಾ ?

ಶ್ರೀ ಎಚ್.ಡಿ. ದೇವೇಗೌಡ.—ಇವರು ನಮಗೂ ಟೋಪಿ ಹಾಕಿದ್ದಾರೆ, ಮತ್ತು ಕಾಂಗ್ರೆಸ್ ಐ ಗೂ ಟೋಪಿ ಹಾಕಿದ್ದಾರೆ. ವಿರೋಧಪಕ್ಷದಲ್ಲಿ ಅವರು ಕೇಂದ್ರದಲ್ಲಿ ಅಧಿಕಾರವನ್ನು ಕಿತ್ತುಕೊಂಡಿರುತ್ತಾರೆ ಅವರಾದರೂ ಹೇಳಲಿ, ಇವರಾದರೂ ಹೇಳಲಿ. ತಪ್ಪು ಎಲ್ಲಿ ಆಗಿರುತ್ತದೆ, ಯಾವ ರಂಗದಲ್ಲಿ ತಪ್ಪಿತಸ್ಥರು ಎನ್ನುವುದನ್ನು ತಿಳಿಸಿದರೆ At least it is a sort of guideline to us. I have no objection. I will take it sportively.

ಶ್ರೀ ಬಿ ಬಸವಲಿಂಗಪ್ಪ.—ನಾನು ಹೇಳುವುದೇ ಬೇರೆ. ಶ್ರೀಮಾನ್ ದೇವೇಗೌಡರು ಹೇಳುವುದೇ ಬೇರೆ ಈಗ ಕೇಂದ್ರದಲ್ಲಿ ಯಾರು ಸೂತ್ರಧಾರಿಗಳು ಇದ್ದಾರೆ ಅವರು ಏನು ಹೇಳುತ್ತಿದ್ದಾರೆ, ಜನತಾ ಪಾರ್ಟಿಯವರು ಹೀಗೆ ಮಾಡಿದರು, ಹಾಗೆ ಮಾಡಿದರೆ ಎಂದು ಚುನಾವಣೆ ಸಮಯದಲ್ಲಿ ಪ್ರಚಾರ ಮಾಡಿದ್ದಲ್ಲದೆ, ಈಗಲೂ ಅದನ್ನೇ ಹೇಳುತ್ತಿದ್ದಾರೆಂದು ಹೇಳಿದೆ.

ಶ್ರೀ ಎಚ್.ಡಿ. ದೇವೇಗೌಡ.—ಅದನ್ನು ನಾನು ಒಪ್ಪಿಕೊಂಡೆ. ಆದರೆ ಭಾರತದಲ್ಲಿ ಅವರು ಅಧಿಕಾರದಲ್ಲಿರುವುದು ಎರಡು ಮೂರು ರಾಜ್ಯಗಳನ್ನು ಬಿಟ್ಟರೆ, ಈಗಲಾದರೂಹೇಳಲಿ What are all the omissions and commissions of the Janatha party when it was rulling the nation.

ವೈಸ್ ಚೇರ್‌ಮನ್.—ಅದಕ್ಕೆ ಫೈನಾನ್ಸ್ ಮಿನಿಸ್ಟರು ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಎಚ್ ಡಿ. ದೇವೇಗೌಡ. ಬಡ್ಜೆಟ್ ಸ್ಪೀಚ್ ಎನ್ನತಕ್ಕಂಥಾದ್ದು. It is the guideline for us for discussion. ಸರ್ಕಾರದ ಧೋರಣೆ ಏನು ಎನ್ನುವುದನ್ನು ಅದರ ಆಧಾರದ ಮೇಲೆ ಚರ್ಚೆ ಮಾಡುತ್ತೇವೆ. ಜನತಾ ಪಕ್ಷದ ಮೇಲೆ ಹೇಳುವುದಾದರೆ ಮಾನ್ಯ ಅರ್ಥ ಸಚಿವರು ಹೇಳುವುದಾದರೆ ಮಾನ್ಯ ಅರ್ಥ ಸಚಿವರು ಇಂಟರ್‌ವಿನ್ ಆಗಿ ಹೇಳುವುದಾದರೆ ನನ್ನ ಅಭ್ಯಂತರವೇನಿಲ್ಲ.

ಶ್ರೀ ಜೆ. ಎಚ್‌ಪಟೇಲ್.—ಜನತಾ ಪಕ್ಷದವರು ಏನೂ ಮಾಡಿದರೂ, ಕಾಂಗ್ರೆಸ್ ಪಕ್ಷದವರು ಏನು ಮಾಡಿದರು ಎಂಬುದನ್ನು ಅಪೋಸಿಷನ್ ಪಾರ್ಟಿ ರೂಮ್ ಇರುತ್ತದೆ ಅಲ್ಲಿ ಕುಳಿತುಕೊಂಡು ಗಂಭೀರವಾಗಿ ಮಾತನಾಡೋಣ, ಈವಾಗ ಇವರು ಏನು ಮಾಡಿದ್ದಾರೆ ಅದನ್ನು ಕೇಳೋಣವೆಂದು ಹೇಳುತ್ತೇನೆ,

ಶ್ರೀ ಬಿ. ಬಸವಲಿಂಗಪ್ಪ.—೧೯೭೨-೭೩ನೇ ಇಸವಿಯಲ್ಲಿ ಬೆಲೆ ಏರಿಕೆ ಶೇಕಡಾ ೧೨ ಪರ್ಸೆಂಟ್ ಆಗಿತ್ತು. ಈಗ ಎಷ್ಟಾಗಿದೆ ಎಂದರೆ ೨೫ ಪರ್ಸೆಂಟ್ ಮೇಲೆ ಏರಿದೆ. ಅಂದರೆ ಶೇಕಡಾ ೨೫ ಪರ್ಸೆಂಟ್‌ಗೆ ಏರಿದರೆ ಖರೀದಿ ಮಾಡುವ ಮನುಷ್ಯನ ಸಂಪಾದನೆಯು ಶಕ್ತಿಯೂ ಕೂಡ ವೃದ್ಧಿಯಾಗಬೇಕು. ಈಗ ೮೦೦ ರೂಗಳಿಂದ ೧೪೮೦ ರೂ.ಗಳವರೆಗೆ ಏರಿದೆ. ಅಂದರೆ ವರ್ಷಕ್ಕೆ ೧೭೦ ರೂ.ನಂತೆ ಜಾಸ್ತಿಯಾಗುತ್ತಾ ಹೋಗಿದೆ. ನಿಮ್ಮ ಬಜೆಟ್‌ನ ಉದ್ದೇಶ ನೋಡಿದರೆ ಪರ್ ಕ್ಯಾಪಿಟಾ ಇನ್‌ಕಂ ೧೪ ೧೪ ಪರ್ಸೆಂಟ್ ಇರುವುದನ್ನು ೭½ ಪರ್ಸೆಂಟ್‌ಗೆ ಇಳಿಸುವಂತಿದೆ. ಇದು ನಿಮ್ಮಿಂದ ಸಾಧ್ಯವೆ? ಎಂದು ನಾನು ತಮ್ಮನ್ನು ಕೇಳಬೇಕಾಗಿದೆ. ನಾನು ಹೇಳುತ್ತಿರುವುದರಲ್ಲಿ ಏನಾದರೂ ತಪ್ಪುಗಳಿದ್ದರೆ ತಾವು ಹೇಳಿದರೆ ನಾನು ತಿದ್ದಿಕೊಳ್ಳುತ್ತೇನೆ. ೧೯೭೭-೭೮ನೇ ಇಸವಿಯಲ್ಲಿ ಅಗತ್ಯ ವಸ್ತುಗಳ ಬೆಲೆ ಏನಿತ್ತು? ಈಗ ಅದರ ಶೇಕಡ ೨೫ರಷ್ಟು ಜಾಸ್ತಿಯಾಗಿದೆ. ಇದರ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಕೊಡಬೇಕಾಗಿದೆ. ನಿಮ್ಮ ಬಜೆಟ್‌ನ ಪ್ರಕಾರ ಜನಗಳ ಖರೀದಿ ಶಕ್ತಿಯನ್ನು ತಾವು ವೃದ್ಧಿ ಮಾಡುವ ಕಡೆಗೆ ಸಾಕಷ್ಟು ಗಮನವನ್ನು ಕೊಟ್ಟಿಲ್ಲವೆಂಬುದೇ ನನ್ನ ಪ್ರಪ್ರಥಮ ಆರೋಪ. ಈಗ ಜನರ ಖರೀದಿ ಶಕ್ತಿಯನ್ನು ಹೆಚ್ಚು ಮಾಡುವುದಲ್ಲದೆ ಏರುತ್ತಿರುವ ಬೆಲೆಗಳನ್ನು ತಡೆಗಟ್ಟದೆ ಹೋದರೆ ನೀವು ಸರ್ಕಾರವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈಗ ೨ ವರ್ಷಗಳ ಹಿಂದೆ ಇದ್ದ ಕಬ್ಬಿಣದ ಬೆಲೆ ಇವತ್ತು ೪೨೦೦ ರೂಗಳಿಗೆ ಏರಿದೆ. ಇದು ಸರ್ಕಾರದಿಂದ ನಿಗದಿ ಮಾಡಲ್ಪಟ್ಟ ಬೆಲೆ. ಆದರೆ ೫,೦೦೦ ರೂಪಾಯಿ ಕೊಟ್ಟರೆ ನಿಮಗೆ ಎಷ್ಟು ಬೇಕಾದರೂ ಸಿಕ್ಕುತ್ತದೆ.

ಇನ್ನೊಂದು ಉದಾಹರಣೆ ಹೇಳುವುದಾದರೆ, ಸಿಮೆಂಟಿನ ಬೆಲೆಯನ್ನು ತಾವು ೨೮ ರೂ.ಗಳಿಗೆ ನಿಗದಿ ಮಾಡಿದ್ದೀರಿ. ಇದು ನಿಯಂತ್ರಿತ ವಸ್ತು. ಆದರೆ ಒಂದು ಮೂಟೆಗೆ ೫೦ ರೂಪಾಯಿಯಂತೆ ಕೊಟ್ಟರೆ ನಿಮಗೆ ಎಷ್ಟು ಮೂಟೆ ಸಿಮೆಂಟ್ ಬೇಕಾದರೂ ಸಿಕ್ಕುತ್ತದೆ.

ಶ್ರೀ ಸಿ ಎಂ. ಇಬ್ರಾಹಿಂ.—ಸ್ವಾಮಿ, ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಇಂಥ ಕಡೆ ಸಿಮೆಂಟ್ ಸಿಕ್ಕುತ್ತದೆಂದು ತಾವು ಕರಾರುವಾಕ್ಕಾಗಿ ತಿಳಿಸಿದರೆ, ಆ ಸಿಮೆಂಟ್‌ನ್ನು ಹಿಡಿದು ಅದರಲ್ಲಿ ತಮಗೂ ಪರ್ಸೆಂಟೇಜ್ ಕೊಡುತ್ತೇನೆ.

ಶ್ರೀ ಜೆ ಹೆಚ್. ಪಟೇಲ್. ಸ್ವಾಮಿ, ನಮಗೆ ಸಿಮೆಂಟ್ ಬೇಡ. ಅದರ ಬದಲು ಹಣವನ್ನು ಕೊಡುವುದಾದರೆ, ಸಿಮೆಂಟ್ ಇರುವ ಜಾಗದಿಂದ ತಮ್ಮ ಮನೆಯ ಹತ್ತಿರಕ್ಕೆ ತರಿಸಿ ಹಾಕಿಸುತ್ತೇವೆ.

ಶ್ರೀ ಹೆಚ್ ಡಿ. ದೇವೇಗೌಡ. ಸ್ವಾಮಿ, ನಾಗರೀಕ ಪೂರೈಕೆ ವಸ್ತುಗಳನ್ನು ಅದರಲ್ಲೂ ನಿಯಂತ್ರಿತ ವಸ್ತುಗಳನ್ನು ಜನರಿಗೆ ಒದಗಿಸಿಕೊಡುವುದರಲ್ಲಿ ನಿಮ್ಮ ಸರ್ಕಾರದ ಯಂತ್ರ ವಿಫಲವಾಗಿದೆ. ಇದನ್ನು ಸರಿಪಡಿಸಿಕೊಳ್ಳಬೇಕಾದರೆ, ರವೀಂದ್ರ ಕಲಾ ಕ್ಷೇತ್ರದ ಎದುರುಗಡೆಯಲ್ಲಿ ಒಬ್ಬ ಖಾಸಗಿ ವ್ಯಕ್ತಿ ಲಿಂಗೇಗೌಡ ಎನ್ನುವವರ ಡಿಟೆಕ್ಟೀವ್‌ಗೆ ಸಂಬಂಧಪಟ್ಟಂತೆ ಟ್ರೈನಿಂಗ್ ಕೊಡುತ್ತಿದ್ದಾರೆ. ಅಲ್ಲಿ ಹೋಗಿ ತರಬೇತಿ ತೆಗೆದುಕೊಂಡು ಬರುವಂತೆ ನಿಮ್ಮ ಅಧಿಕಾರಿಗಳಿಗೆ ತಿಳಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭಾಧ್ಯಕ್ಷರೆ, ಸರ್ಕಾರದಿಂದ ನಿಯಂತ್ರಿತವಾಗಿರುವ ಯಾವ ಸಾಮಾನನ್ನೇ ಆಗಲಿ ನಾನು ತಂದುಕೊಡಬೇಕಾದರೆ ನಾವು ಕೇಳಿದಷ್ಟು ಹಣವನ್ನು ಸರ್ಕಾರದವರು ಕೊಡಬೇಕು, You have impose control on certain commodities. But at the same time you allow such arricles to be sold freely in open market. How do you account for this? ಪಿ.ಡಿ ಆಕ್ಟನ್ನು ಬಹಳ ತುರ್ತಾಗಿ ಜಾರಿಗೆ ತಂದಿರಿ, ಆದರೆ ಅದರಿಂದ ಏನಾದರೂ ಪ್ರಯೋಜನವಾಯಿತೆ? ಮಾನ್ಯ ಇಬ್ರಾಹಿಂರವರು ಸಣ್ಣ ಕೈಗಾರಿಕಾ ಖಾತೆ ಸಚಿವರಾಗಿದ್ದಾರೆ. ಅವರ ಕೈಯಲ್ಲಿ ಪಿ.ಡಿ. ಆಕ್ಟ್ ಇದೆ, ಆದರೆ ಏನು ಪ್ರಯೋಜನ? ಯಾವ ನಾಗರೀಕ ಕೆಟ್ಟ ಪ್ರವೃತ್ತಿಯಿಂದ ಹಣ ಸಂಪಾದನೆ ಮಾಡುತ್ತಾನೆ ಅವನಿಗೆ ಸ್ವತಃ ಹೆದರಿಗೆ ಉಂಟಾಗುವಂತಿರಬೇಕು. ಅಂಥ ವಾತಾವರಣವನ್ನು ಸರ್ಕಾರದವರು ಉಂಟು ಮಾಡಿದರೆ ಆಗ ನಮ್ಮ ರಾಜ್ಯದಲ್ಲಿ ಸರ್ಕಾರ ಇದೆಯೆಂದು ನಾವು ಒಪ್ಪಿಕೊಳ್ಳುತ್ತೇವೆ. ಇದು ಹೇಗಿದೆ ಎಂದರೆ ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ ಎನ್ನುವಂತೆ. ರಾಮನೂ ಚೆನ್ನಾಗಿರಬೇಕು, ರಾವಣನೂ ಚೆನ್ನಾಗಿರಬೇಕು ಎಂದರೆ ಇದು ಹೇಗೆ ಸಾಧ್ಯ? ಮಾನ್ಯ ಅರ್ಥ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದಾದರೂ ಇಷ್ಟೆ. ತಾವು ಏನು ಅಂದಾಜು ಮಾಡುತ್ತೀರಿ. ಏನು ನಿಯಂತ್ರಣ ಮಾಡುತ್ತೀರಿ ಅದು ದೇಶದ ಎಲ್ಲ ಜನರಿಗೂ ತಿಳಿಯುವಂತೆ ಮೊದಲು ವ್ಯವಸ್ಥೆ ಮಾಡಬೇಕು. ಸರ್ಕಾರದವರು ನಿಯಂತ್ರಣ ಮಾಡುವ ಎಲ್ಲ ವಸ್ತುಗಳೂ ನಮಗೆ ಸುಲಭವಾಗಿ ದೊರೆಯುತ್ತವೆ ಎಂಬ ಭಾವನೆ ಜನರಲ್ಲಿ ಬರುವಂತಿರಬೇಕು.

ಇನ್ನೂ ಕೆಲವು ಉದ್ದೇಶಗಳನ್ನು ನಿಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಪರ್ ಕ್ಯಾಪಿಟಾ ಆದಾಯವನ್ನು ೭೪ ಪರ್ಸೆಂಟ್‌ಗೆ ಇಳಿಸುತ್ತೇವೆಂದು ಏನು ಹೇಳಿದ್ದೀರಿ ಇದನ್ನು ಕಾರ್ಯತಃ ಮಾಡಿ ತೋರಿಸಿದರೆ ಖಂಡಿತವಾಗಿ ನಿಮ್ಮ ಬೆನ್ನು ತಟ್ಟುತ್ತೇನೆ. ನಿಮ್ಮ ಡೆಫನಿಷನ್‌ನಲ್ಲಿ ಈ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂದರೆ ಮುನಿಸಿಪಾಲಿಟಿಗಳಲ್ಲಿರತಕ್ಕ ಡೆಬ್ರೀಸ್ ಇದ್ದ ಹಾಗೆ. ಈ ಆರ್ಥಿಕ ಪರಿಸ್ಥಿತಿ ಎಂದೂ ಸುಧಾರಿಸುವುದಕ್ಕೆ ಸಾಧ್ಯವಿಲ್ಲ.

SRI M. VEERAPPA MOILY.—Sir may I know the Municipalities which have created debris ?

SRI B. BASAVALINGAPPA.—Whichever Municipality it may be. The present economic position of the State is a big debris. Your Government is responsible for this.

ಶ್ರೀ ಎಂ ವೀರಪ್ಪ ಮೊಯಿಲಿ (ಮಾನ್ಯ ಹಣಕಾಸಿನ ಸಚಿವರು).—ನೀವು ಎಷ್ಟು ಹೇಳಿದರೂ ನಿಮ್ಮ ಕಥೆಯನ್ನೇ ಹೇಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಒಂದು ಒಳ್ಳೆಯ ಪರಿಸ್ಥಿತಿ ನಿರ್ಮಾಣ ಮಾಡಿದ್ದೆವು. ನಿಮ್ಮ ಬಡ್ಜೆಟ್ಟಿನ ನಾಲ್ಕನೇ ಪ್ಯಾರಾದಲ್ಲಿ ಚೆನ್ನಾಗಿ ಬರೆದಿದ್ದೀರಿ ? ಅದರಲ್ಲಿ ಬರೆದಿರುವ ರೀತಿ ಕೆಲಸಕಾರ್ಯಗಳು ನಡೆಯುತ್ತಿವೆಯೋ ಪರಿಣಾಮ ಕಾರ್ಯಗಳಲ್ಲಿ ಆಗುತ್ತಿದೆಯೋ ಅದನ್ನು ನೋಡಿ ನೀವು ಹೇಳಿ ಆಗ ನನಗೆ ಸಂತೋಷವಾಗುತ್ತದೆ. ನಾವು ಮೂರು ತಿಂಗಳು ಕಾದು ನೋಡಿವೆವು ಏನಾದರೂ ಒಂದು ಬದಲಾವಣೆ ಆಗಿದೆಯೆ, ಕಾರ್ಮಿಕರಲ್ಲಿ, ಕುಶಲ ಕಾರ್ಮಿಕರು ಹಳ್ಳಿಗಳಲ್ಲಿ ಇರತಕ್ಕಂಥ ಜನರು ಏನು ಇದ್ದಾರೆ ಅವರ ಅಭಿವೃದ್ಧಿಗೆ ಗಮನಕೊಟ್ಟು ಸಾಧನೆ ಮಾಡುತ್ತೇವೆಂದು ಹೇಳಿದ್ದೀರಿ ? ಇನ್ನು ಬಾಂಡೆಡ್ ಲೇಬರ್ ಬಗ್ಗೆ ಎಷ್ಟು ಹಳ್ಳಿಗಳಲ್ಲಿ ಅವರನ್ನು ವಿಮುಕ್ತರನ್ನಾಗಿ ಮಾಡಿ ನೀವು ಅವರಿಗೆ ಪುನರ್ ವ್ಯವಸ್ಥೆ ಮಾಡಿದ್ದೀರಿ ? ಬರೀ ಸ್ಲೋಗನ್ ಯೋಜನೆಯನ್ನು ತಯಾರು ಮಾಡಿದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ —ನಾವು ಈ ಒಂದು ವರ್ಷದಲ್ಲಿ ಒಂದು ಕೋಟಿರೂಪಾಯಿ ಈ ಯೋಜನೆಗೆ ಕೊಟ್ಟಿದ್ದೇವೆ. ತಾವು ಇದ್ದಾಗ ಏನನ್ನೂ ಮಾಡಲಿಲ್ಲ ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅರ್ಥ ಮಂತ್ರಿಗಳು ಹೇಳುವ ಮಾತನ್ನು ನೋಡಿದರೆ ಮರುಕವಾಗುತ್ತದೆ, ನೋಡದೆ ಇಲ್ಲದೆ ಇರುವುದನ್ನು ಹೇಳುವುದು ಸರಿಯಲ್ಲ. ಈ ಜೀತದ ಆಳುಗಳು ಏನು ಇದ್ದಾರೆ ಅವರ ಪುನರ್‌ವ್ಯವಸ್ಥೆ ಮಾಡಬೇಕೆಂದು ಯೋಜನೆ ತಯಾರು ಮಾಡಿದ್ದನ್ನು ನೀವು ನೋಡಿದ್ದೀರಿ ? ಪ್ರಪ್ರಥಮವಾಗಿ ನನ್ನ ಕ್ಷೇತ್ರದಲ್ಲಿ ಪ್ರಾರಂಭ ಮಾಡಬೇಕೆಂದು ಮಾಡಿದ್ದೆ. ನಮ್ಮ ರಾಜ್ಯದಲ್ಲಿ ನನಗೆ ಲೆಕ್ಕವಿರುವಷ್ಟು ಹೇಳುವುದಾದರೆ ಸುಮಾರು ಅರವತ್ತೈದು ಸಾವಿರ ಜನ ಇದ್ದಾರೆ ಇವರೆಲ್ಲರನ್ನೂ ಪುನರ್ ವ್ಯವಸ್ಥೆಗೊಳಿಸಬೇಕೆಂದು ಯೋಜನೆ ಮಾಡಿದ್ದೆವು. ಆದರೆ ಅಗ್ರಿಕಲ್ಚರ್‌ನಲ್ಲಿ ಇವರೆಲ್ಲರನ್ನು ಪುನರ್‌ವ್ಯವಸ್ಥೆ ಮಾಡಬೇಕೆಂದು ಯೋಜನೆ ಮಾಡಿದ್ದೆವು. ನೀವು ನಾವು ಮಾಡಿರುವ ಯೋಜನೆಗಳನ್ನು ನೋಡಿ ? ಹಣ ಖರ್ಚು ಮಾಡದೆ ಇರಬಹುದು ಆದರೆ ಯೋಜನೆಯನ್ನು ತಯಾರು ಮಾಡಿದ್ದು ನವೆಂಬರ್ ಡಿಸೆಂಬರ್‌ನಲ್ಲಿ.

ಶ್ರೀ ಎಂ. ವೀರಪ್ಪಮೊಯಿಲಿ.—ಈ ಜೀತ ವಿಮುಕ್ತಿ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಲ್ಲ ಇವರನ್ನು ವಿಮುಕ್ತಿಮಾಡಿ ಸುಮಾರು ೭೬-೭೭ರಲ್ಲಿ ಮಾಡಿದ್ದಿರಿ ಅವರಿಗೆ ಏನು ಕಾರ್ಯಕ್ರಮ ಹಾಕಿ ಕೊಟ್ಟಿಲ್ಲ. ನೀವು ಅನೇಕ ಯೋಜನೆಗಳನ್ನು ಮಾಡಿದ್ದಿರಿ ಆದರೆ ಒಂದನ್ನು ಅನುಷ್ಠಾನಕ್ಕೆ ತಂದಿದ್ದೀರಾ ಆದರೆ ನಾವು ಅನೇಕ ಯೋಜನೆಗಳನ್ನು ಮಾಡಿದ್ದೇವೆ ನಾವು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದೇವೆ ಬಡ್ಜೆಟ್ಟಿನಲ್ಲಿ ಹಣವನ್ನು ಕೂಡ ಒದಗಿಸಿದ್ದೇವೆ, ಏನು ಮಾಡುತ್ತೇವೆಂದು ಸ್ವಲ್ಪ ಕಾದು ನೋಡಿ ಮಾಡುತ್ತೇವೋ ಇಲ್ಲವೋ ಸುಮ್ಮನೆ ಏತಕ್ಕೆ ಸಂಶಯ ವ್ಯಕ್ತಪಡಿಸುತ್ತೀರಿ ? ಹೀಗೆ ಸಂಶಯ ವ್ಯಕ್ತಪಡಿಸಿದರೆ ಅದು ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಅಂಗೈ ನೋಡಿದರೆ ಕಾಣುವುದಿಲ್ಲವೇ ? ೬ ತಿಂಗಳು ಸರಕಾರ ಮಾಡಿದ್ದೀರಿ ?

ಶ್ರೀಮತಿ ಪ್ರಮೀಳಾ.—ಯಾವುದನ್ನೂ ಮಾಡದಿದ್ದರೂ ಈ ಸರ್ಕಾರ ಜೀತಮುಕ್ತರನ್ನಾಗಿ ಈ ಕಡೆ ಇರುವ ಶಾಸಕರನ್ನೆಲ್ಲಾ ವಿಮುಕ್ತರನ್ನಾಗಿ ಮಾಡಿದ್ದಾರೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಸರ್ಕಾರ ನಡೆಸಿದ್ದೇವೆ, ಮಾಡಬೇಕಾದ್ದನ್ನು ಮಾಡುತ್ತಿದ್ದೇವೆ

ಶ್ರೀ ಬಿ. ಬಸವಲಿಂಗಪ್ಪ.—ನೀವು ಏನು ಮಾಡಿದ್ದೀರಿ ? ವ್ಯವಸಾಯ ಕ್ಷೇತ್ರದಲ್ಲಿ ಎಷ್ಟು ಏನು ಹೊಸದಾಗಿ ಪ್ರಾರಂಭಮಾಡಿದ್ದೀರಿ ? ಇನ್ನು ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಂ ಏನು ಮಾಡಿದ್ದೀರಿ ?

ಶ್ರೀ ಎಂ. ವೀರಪ್ಪಮೊಯಿಲಿ.—ಈ ಯೋಜನೆಗಳನ್ನು ಹಳ್ಳಿಗಳಲ್ಲಿ ಮಾಡಬೇಕೇ ಅಥವಾ ಪಟ್ಟಣ ಗಳಲ್ಲಿ ಮಾಡಬೇಕೇ ?

ಶ್ರೀ ಬಿ. ಬಸವಲಿಂಗಪ್ಪ.—ಮೊದಲು ನಿಮ್ಮ ಊರಿನಲ್ಲೇ ಪ್ರಾರಂಭ ಮಾಡಿಕೊಳ್ಳಿರಿ ? ನಾನು ಬೇಡವೆಂದು ಹೇಳುವುದಿಲ್ಲ. ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್ ಒಂದು ಮಾಡಿದ್ದೀರಿ ಈಗ ಅಲ್ಲಿ ನೀವು ಬ್ಲಾಕ್‌ಡೆವಲಪ್‌ಮೆಂಟ್ ಆಫೀಸರ್ಸ್‌ಗಳಿಗೆ ಸಂಪೂರ್ಣವಾಗಿ ಅಧಿಕಾರ ಕೊಟ್ಟು ಬಿಟ್ಟು, ಅವರು ಬೇಕಾದ್ದು ಮಾಡಲಿಕ್ಕೆ ಅವಕಾಶ ಉಂಟು. ಇದರಲ್ಲಿ ಯೂತ್ ಕಾಂಗ್ರೆಸ್‌ನವರು ಅವರಿಗೆ ಎದುರಿಸುತ್ತಿದ್ದಾರೆಂದು ಕೇಳಿದ್ದೇನೆ. ಇದು ನಿಜ ಇಬರಹುದು ಅಥವಾ ಇಲ್ಲದೆ ಇರಬಹುದು. ನಾವು ಏನು ಬಡವರಿಗೆ ಕೆಲಸ ಕೊಡಬೇಕೆಂದು ಈ ಯೋಜನೆಯನ್ನು ತಂದೆವು ಅನು ಇವತ್ತು ಕಂಟ್ರಾಕ್ಟ್ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಕೇಳಿದರೆ ಹೇಗೆ ? ಇದು ಕೂಲಿ ಮಾಡಿಸಿ ಕೆಲಸಮಾಡ ಬೇಕಾಗುತ್ತದೆ. ನಾನು ಮೊನ್ನೆ ಕೊಳ್ಳೆಗಾಲಕ್ಕೆ ಹೋಗಿದ್ದೆ ಮತ್ತು ಚಳ್ಳಕೆರೆಗೆ ಹೋಗಿದ್ದೆ ಅಲ್ಲಿ ಹಾಗೆ ಮಾಡಿದ್ದಾರೆ. ಕಂಟ್ರಾಕ್ಟ್‌ಗೆ ನೇಮಿಸಿ ಬಿಟ್ಟು ಮಾಡುವ ಕೇಸವಲ್ಲ, ಹಳ್ಳಿಯಲ್ಲಿ ಇರುವವರಿಗೆ ಕೆಲಸ ಕೊಟ್ಟು ಅವರಿಗೆ ಅನುಕೂಲಮಾಡಿ ಇದರಲ್ಲಿ ರಾಜಕೀಯ ಬೇಡ. ಯಾರು ಬಡ ಜನರು ಇದ್ದಾರೆ ಅವರ ಕಡೆಗೆ ಸಾಕಷ್ಟು ನೀವು ಗಮನಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ದೇವೇಗೌಡರು ಮಾತನಾಡು ವವರು ಇದ್ದಾರೆ ಆದ್ದರಿಂದ ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ, ಹಾಗೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ನಲ್ಲಿ ೧೦೦-೧೦೦೦ ಜನರನ್ನು ನೇಮಿಸಿ ಬಿಟ್ಟು ಅಗ್ರಿಕಲ್ಚರ್ ಕ್ಷೇತ್ರವನ್ನು ಇಂಡಸ್ಟ್ರೀಸ್ ಕ್ಷೇತ್ರದಲ್ಲಿ ಕೊಡುವಂತೆ ಸಬ್ಸಿಡಿ ಕೊಡುತ್ತೀರಾ ? ಆ ವ್ಯವಸ್ಥೆಯಿಲ್ಲ. ಪ್ರತಿಯೊಬ್ಬ ಕಾರ್ಮಿಕನಿಗೆ ಅವರವರ ರೈತಕಾರ್ಮಿಕ ಯಾರು ಇದ್ದಾನೆ ಅವನಿಗೆ ಕೊಡಬೇಕು. ಕಾರಣ ಏನು ಎಂದರೆ ನಾನು ಇವತ್ತಿನದಿನ ಹಳ್ಳಿಯಲ್ಲಿನ ಜೀವನ ಮಟ್ಟ ಪಟ್ಟಣದ ಜೀವನ ಮಟ್ಟಕ್ಕೆ ಹತ್ತಿರ ತರತಕ್ಕಂಥ ಅವಶ್ಯಕತೆ ಇದೆ ಎಂದು ಹೇಳುತ್ತೇನೆ ಕೊನೆಯದಾಗಿ ಎಸ್‌ಸಿ, ಎಸ್‌ಟಿ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಏನು ಹೇಳಿದ್ದೀರಿ ಹಿಂದಿನ ಕಾರ್ಯಕ್ರಮವನ್ನೇ ಜಾರಿಗೆ ಕೊಡುತ್ತೇವೆಂದು ಹೇಳಿದ್ದೀರಿ ? ಹಿಂದಿನ ಕಾರ್ಯಕ್ರಮ ಇದ್ದೇ ಇದೆ ಅದರಲ್ಲಿ ಎಷ್ಟು ಕಾರ್ಯಗತವಾಗಿದೆ ಎಂದು ನೋಡಬೇಕಾಗುತ್ತದೆ.

೫-೩೦ ಪಿ. ಎಂ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಬ್ಯಾಕ್‌ವರ್ಡ್ ಕ್ಲಾಸಿನವರ ಬಗ್ಗೆ ಮತ್ತು ಷೆಡ್ಯೂಲ್ ಕ್ಯಾಸ್ಟಿನ ವರ ಬಗ್ಗೆ ಹಿಂದೆ ಯಾವ ಕಾರ್ಯಕ್ರಮಗಳು ಇದ್ದವೋ, ಯಾವ ವ್ಯವಸ್ಥೆ ಇತ್ತೋ ಅವನ್ನೇ ಮಾಡಿಕೊಂಡು ಬಂದಿದ್ದಾರೆ. ಕಾಂಗ್ರೆಸ್ (ಐ) ಸರ್ಕಾರದವರು ಹರಿಜನಗಿರಿಜನರು, ಮುಸ್ಲಿಮರು ಮತ್ತು ಮೈನಾರಿಟಿ ವರ್ಗದವರಿಂದ ವೋಟು ತೆಗೆದುಕೊಂಡು ಅಧಿಕಾರಕ್ಕೆ ಬಂದಿದ್ದಾರೆ. ದಲಿತ ವರ್ಗದ ಜನಗಳಿಗೆ ಹಿಂದುಳಿದ ವರ್ಗದ ಜನಗಳಿಗೆ ಯಾವರೀತಿಯಾದ ವಿಶೇಷವಾಗಿರತಕ್ಕ ಆರ್ಥಿಕ ಕಾರ್ಯಕ್ರಮಹಾಕಿಕೊಳ್ಳ ಬೇಕು ಎಂದುಯೋಚನೆ ಮಾಡಿದ್ದೀರಾ? ಅವರಿಗೆ ಸ್ಕಾಲರ್‌ಷಿಪ್ ಕೊಟ್ಟರೆ ಉದ್ಧಾರವಾಗುತ್ತಾರೆ ಕೋಳಿ, ಹಂದಿ ಕೊಟ್ಟರೆ ಉದ್ಧಾರವಾಗುತ್ತಾರೆಯೇ ? ವ್ಯವಸ್ಥಿತ ರೂಪದಲ್ಲಿ ಆರ್ಥಿಕ ವ್ಯವಸ್ಥೆಮಾಡಬೇಕಾದರೆ ಸಾಮಾಜಿಕ ವ್ಯವಸ್ಥೆ ಮಾಡಬೇಕಾದರೆ ಹೊಸದಾಗಿ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕಾಗುತ್ತದೆ ೧೭ ಪರ್ಸೆಂಟ್ ಅಗ್ರಿಕಲ್ಚರಲ್ ಲೇಬರರ್ಸ್ ಇದ್ದಾರೆ. ಇದರಲ್ಲಿ ಮುಕ್ಕಾಲುಭಾಗ ದಲಿತರು ಮತ್ತು ಹಿಂದುಳಿದ ವರ್ಗದವರೇ ಇದ್ದಾರೆ ಈಗ ಹತ್ತಾರು ವರ್ಷಗಳಿಂದ ಕೃಷಿ ಕಾರ್ಮಿಕರು ಕೃಷಿ ಲೇಬರರುಗಳಾಗಿ ಕೆಲಸ ಮಾಡಿ ಜೀವನ ಮಾಡುತ್ತಿದ್ದಾರೆ. ಅವರ ಸ್ಥಿಗಳು ಚಿಂತಾಜನಕವಾಗಿವೆ. ಇದರ ಬಗ್ಗೆ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಬಹಳ ತೀವ್ರವಾಗಿ ಗಮನಕೊಡಬೇಕು. ಇದರ ಬಗ್ಗೆ ಒಂದು ಎಕ್ಸ್‌ಪರ್ಟ ಕಮಿಟಿಯನ್ನು ನೇಮಕ ಮಾಡಿ ಅದರಿಂದ ಯಾವ ಕಾರ್ಯಕ್ರಮಗಳನ್ನು

ಹಾಕಿಕೊಂಡರೆ ಅವರ ಆರ್ಥಿಕ ವ್ಯವಸ್ಥೆ ಸರಿಯಾಗುತ್ತದೆ, ಸಾಮಾಜಿಕ ವ್ಯವಸ್ಥೆ ಸರಿಯಾಗುತ್ತದೆ ಎಂದು ಯೋಚನೆ ಮಾಡಿ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡಬೇಕು. ಹಿಂದೆ ಏನೋ ಮಾಡಿದ್ದಾರೆ ಅದನ್ನೇ ಮುಂದುವರಿಸಿಕೊಂಡು ಹೋಗುತ್ತೇವೆ, ಅಥವಾ ನನಗೆ ತಿಳಿದ ಹಾಗೆ ಮಾಡುತ್ತೇನೆ ಎಂದು ಒಂದು ದೊಡ್ಡ ವರ್ಗಾವಣೆ ಮಾಡತಕ್ಕದ್ದು ಸಾಧುವಲ್ಲ ನನ್ನ ಅನುಭವದಲ್ಲಿ ಹೇಳುವುದಾದರೆ ಅದು ಸಾಕಷ್ಟು ಪರಿಣಾಮಕಾರಿಯಾಗಿ ಆಗಿಲ್ಲ. ಅದು ಹೇಗಿದೆಯೋ ಹಾಗೆಯೇ ಇದೆ. ಹಳ್ಳಿಗಾಡುಗಳಲ್ಲಂತೂ ಹಿಂದೆ ಹೇಗಿತ್ತೋ ಹಾಗೆಯೇ ಇದೆ. ಆದ್ದರಿಂದ ಅದಕ್ಕಾಗಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಬೇಕು. ಅನೇಕ ಷೆಡ್ಯೂಲ್ ಕಾಸ್ಟ್ ಕಮಿಟಿಗಳ ರಿಪೋರ್ಟ್‌ಗಳು ಇವೆ. ಕಮಿಷನರುಗಳ ರಿಪೋರ್ಟ್‌ಗಳು ಇವೆ, ಅವುಗಳಲ್ಲಿ ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳನ್ನು ಆ ಶಿಫಾರಸ್ಸುಗಳನ್ನು ಓದಿ ಹರಿಜನರ ಮತ್ತು ಹಿಂದುಳಿದ ವರ್ಗದವರ ಕಲ್ಯಾಣದ ಬಗ್ಗೆ ಆರ್ಥಿಕ ವ್ಯವಸ್ಥೆಯ ಬಗ್ಗೆ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಅದನ್ನು ಹಾಕಿಕೊಳ್ಳಬೇಕು. ಈ ಕಾರ್ಯಕ್ರಮವನ್ನು ಮಾಡಿ. ಇದಕ್ಕೆ ಪ್ರತ್ಯೇಕ ಇಲಾಖೆಯನ್ನು ನಿರ್ಮಿಸುವುದು ಬಹಳ ಅವಶ್ಯ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಜೊತೆಗೆ ಲೇಬರ್ ಡಿಪಾರ್ಟ್‌ಮೆಂಟ್ ಇನ್ನೂ ಮುಂತಾದ ಡಿಪಾರ್ಟ್‌ಮೆಂಟ್‌ಗಳನ್ನು ಸೇರಿಸಿದ್ದಾರೆ. ಇದಕ್ಕೆ ಪ್ರತ್ಯೇಕವಾದ ಇಲಾಖೆ ಇರಬೇಕು. ಇದಕ್ಕೆ ಒಬ್ಬರು ಸೆಕ್ರೆಟರಿ ಇರಬೇಕು. ಮತ್ತು ಇದಕ್ಕೆ ಸರಿಯಾದ ಸಿಬ್ಬಂದಿ ಇರಬೇಕು. ಇಲ್ಲದೆ ಹೋದರೆ ನ್ಯಾಯವಾದ ಗಮನ ಇಟ್ಟು ತೀಕ್ಷ್ಣವಾಗಿ ಕೆಲಸ ಮಾಡುವುದಕ್ಕೆ ಆಗುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಕಡೆ ಸರ್ಕಾರ ಗಮನ ಕೊಡಬೇಕು. ಸೋಷಿಯಲ್ ವೆಲ್‌ಫೇರ್ ಮತ್ತು ಕಮ್ಯೂನಿಟಿ ಎಕ್ಸ್‌ಪೆಂಡಿಚರ್ ಜಾಸ್ತಿ ಕೇಳಿದ್ದೀರಿ, ಇದನ್ನು ವಿನಿಯೋಗಿಸುವುದಕ್ಕೆ ಯಾವ ಯೋಚನೆ ಮಾಡಿದ್ದೀರಾ ? ಆದ್ದರಿಂದ ವಿರೋಧಿಸಿ ನಾನು ಈ ಚರ್ಚೆಗೆ ಬಹಳ ಹೊತ್ತು ತೆಗೆದುಕೊಂಡಿದ್ದೇನೆ. ಮಾನ್ಯ ಸ್ನೇಹಿತರು ಮಾತನಾಡುವವರು ಇದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಈ ಆಯವ್ಯಯ ಅಂದಾಜು ಪಟ್ಟಿಯನ್ನು ಏನು ಈ ಸಭೆಯ ಮುಂದೆ ಇಟ್ಟಿದ್ದಾರೆ ಇದು it is short of direction ; it is short of guide-lines, it is not objective-oriented and it is not aimed at taking all the planes and programmes into consideration and implement the effectively to the advantage of millions and millions of people for whom the Government is being run by the Ministers.

Thank you very much.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).— ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ೧೯೮೦-೮೧ ಸಾಲಿನ ಆಯವ್ಯಯ ಪಟ್ಟಿಯನ್ನು ಬೆಂಬಲಿಸಿ ನಾನು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಇದುವರೆಗೂ ಮಾನ್ಯ ಬಸವಲಿಂಗಪ್ಪ ಮಾತನಾಡಿದ್ದನ್ನು ಬಹಳ ಕುತೂಹಲದಿಂದ ಗಮನವಿಟ್ಟು ಕೇಳಿದ್ದೇನೆ. ನಾನು ಅವರ ಬಗ್ಗೆ ಬಹಳ ಪಶ್ಚಾತ್ತಾಪ ಪಡುತ್ತೇನೆ. ಅವರು ಈ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಬೇಕಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್ .— ನೀವು ಮಂತ್ರಿಗಳಾಗಬೇಕಾಗಿತ್ತು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ .— ಮಂತ್ರಿಯಾಗುವುದು ನನ್ನ ಜಾತಕಬಲದಲ್ಲಿ ಇಲ್ಲ ಬಿಡಿ.

ಶ್ರೀ ಎಚ್. ಡಿ. ದೇವೇಗೌಡ .— ಶ್ರೀಮಾನ್ ಬಸವಲಿಂಗಪ್ಪನವರ ಜಾತಕಬಲದಲ್ಲೂ ಮುಖ್ಯ ಮಂತ್ರಿಗಳಾಗುವುದು ಇಲ್ಲ ಬಿಡಿ,

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ .— ಶ್ರೀಮಾನ್ ಬಸವಲಿಂಗಪ್ಪನವರು ಪಾಪ ಅವರ ಹೊಡಪನ್ನು ಅವರೇ ತೋಡಿಕೊಂಡರು ಬಿಡಿ. ಅವರು ದೆಹಲಿಯಿಂದ ಬಂದು ಇಳಿದ ಮೇಲೆ ೧೫ ದಿವಸಗಳು ಯಾರಿಗೂ ಕಾಣದಂತೆ ಅಜ್ಞಾತವಾಸವಾಗಿದ್ದರು. ಕರ್ನಾಟಕದಲ್ಲಿ ಒಬ್ಬರು ಹರಿಜನ

ನಾಯಕರು ಮುಖ್ಯ ಮಂತ್ರಿಗಳಾಗತಕ್ಕಂಥಾ ಅವಕಾಶವನ್ನು ಕಳೆದುಕೊಳ್ಳುತ್ತಾರಲ್ಲ ಎಂದು ನಾನು ದುಃಖಿಸಿದ್ದೆ. ಒಬ್ಬ ಹರಿಜನ ನಾಯಕರು ಮುಖ್ಯ ಮಂತ್ರಿಗಳಾಗುವುದು ತಪ್ಪಿ ಹೋಯಿತಲ್ಲಾ ಎಂದು ಕರ್ನಾಟಕದ ಜನಗಳು ಕಣ್ಣೀರು ಹಾಕಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ .— ನೀವು ಹರಿಜನ ಎನ್ನುವ ಪದವನ್ನು ಬಿಡುವುದಿಲ್ಲವೆ? ವರ್ಗದ ಜನ ಎಂದು ಹೇಳಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್, — ಶ್ರೀಮಾನ್ ಬಸವಲಿಂಗಪ್ಪನವರು ಮಹಮದೀಯ ಪಂಥಕ್ಕೆ ಸೇರಿಕೊಳ್ಳುತ್ತಾರೆಂದು ಗೊತ್ತಾಗಿದೆ. ಹಾಗಾದರೆ ಹಿಂದು ಮತಕ್ಕೆ ಒಂದು ದೊಡ್ಡ ಆಘಾತವಾದಹಾಗೆ ಅದು ಹಾಗಿರಲಿ. ಶ್ರೀಮಾನ್ ಬಸವಲಿಂಗಪ್ಪನವರು ಇದುವರೆಗೂ ಮಾತನಾಡಿದ್ದೆಲ್ಲಾ ತಮ್ಮ ಮುಂದಿನ ನೇರಕ್ಕೆ ಮಾತನಾಡಿದರು. ಈಗ ಅಧಿಕಾರದಲ್ಲಿರತಕ್ಕ ಕಾಂಗ್ರೆಸ್ (ಐ) ಸರ್ಕಾರ ಅಧಿಕಾರಕ್ಕೆ ಬಂದು ೬ ತಿಂಗಳಾಯಿತು. ಅಂದಮೇಲೆ ಅವರು ಈ ೬ ತಿಂಗಳ ಶಿಶುವನ್ನು ಇಟ್ಟುಕೊಂಡು ಮಾತನಾಡಿದ್ದಾರೆ. ಇದು ಇನ್ನೂ ಶೈಶವಾವಸ್ಥೆಯಲ್ಲಿದೆ. ಇವರು ೧೦–೧೨ ವರ್ಷಗಳ ಕಾಲದಲ್ಲಿ ಮಂತ್ರಿಗಳಾಗಿ ಮಾಡಿರತಕ್ಕ ಆಗುಹೋಗುಗಳನ್ನು ನೋಡುವುದಾದರೆ ಮಾತ್ರ, ಇವರು ಕಾರಣೀಭೂತರಾಗಿರತಕ್ಕ ಇವರು ಮಾಡಿರತಕ್ಕ ಎರಡು ಕಲ್ಯಾಣ ಕಾರ್ಯವನ್ನು ಹೇಳುತ್ತೇನೆ. ಇವರಲ್ಲಿ ಒಂದನೆಯದು, ಚಕ್ರಾ ಯೋಜನೆಗೆ ಸುಮಾರು ೨೫-೩೦ ಕೋಟಿ ರೂಪಾಯಿಗಳ ಬೆಲೆಬಾಳುವ ಮೆಷಿನರಿಯನ್ನು ತಮ್ಮ ಅಧಿಕಾರಾವಧಿಯಲ್ಲಿ ವಿದೇಶದಿಂದ ತರಿಸಿಕೊಂಡು ಅದು ಉಪಯೋಗಕ್ಕೆ ಬಾರದೆ ಹಾಗೆಯೇ ಬಿದ್ದಿವೆ. ಹೀಗಿರಬೇಕಾದರೆ ಇವರು ಮಂತ್ರಿಗಳಾಗಿದ್ದಾಗ ಯಾವ ರೀತಿ ವ್ಯವಹಾರ ನಡೆಯಿತು ಎಂಬುದನ್ನು ಊಹಿಸಬೇಕು.

ಈ ದೇಶದಲ್ಲಿ ಸಿಕ್ಕತಕ್ಕ ಮೆಷಿನರಿಗಳಿಂದ ಈ ಕೆಲಸವನ್ನು ಮಾಡಬಹುದಾಗಿತ್ತು. ವಿದೇಶದಿಂದ ಮೆಷಿನರಿಗಳನ್ನು ತರಿಸತಕ್ಕ ಅವಶ್ಯಕತೆ ಇರಲಿಲ್ಲ. ನಂತರ ನಾರಾಯಣಪುರದಲ್ಲಿ ಡ್ಯಾಂಗೆ ಅರ್ಥ್ ವರ್ಕ್ಸ್ ಆಗಿದೆ. ಪುನಃ ವರ್ಲ್ಡ್ ಬ್ಯಾಂಕಿನವರು ಒಪಿನಿಯನ್ ಕೊಟ್ಟರು ಎಂದು ಹೇಳಿ ಇದ್ದ ಡ್ಯಾಂನ್ನು ಕೆಡಿಸಿ ಮೆಷಿನರಿ ಡ್ಯಾಂನ್ನು ಕಟ್ಟುತ್ತಿದ್ದಾರೆ. ಇದೂ ಕೂಡ ತಮ್ಮ ಘನ ಸರ್ಕಾರದಲ್ಲಿ ಆದಂಥ ಕಾರ್ಯವೇ. ಇದರಿಂದ ದೇಶಕ್ಕೆ ಕೋಟ್ಯಾಂತರ ರೂಪಾಯಿಗಳ ಲುಕ್ಸಾನು ಆಯಿತು. ಎನ್ನುವುದನ್ನು ನಾವು ತಿಳಿಯಬೇಕಾಗಿದೆ. ಮಾನ್ಯ ಹಿಂದಿನ ಕಂದಾಯ ಮಂತ್ರಿಗಳು ಮಾಡಿದಂಥ ಇನ್ನೊಂದು ದೊಡ್ಡ ಉಪಕಾರವೆಂದರೆ ನಮ್ಮ ಜಿಲ್ಲೆಯೊಳಗೆ ಚಟ್ನಿಹಳ್ಳಿ ಗ್ರಾಮದಲ್ಲಿ ಸುಮಾರು ೫೦೦-೬೦೦ ಎಕರೆ ಜಮೀನು. ಶ್ರೀಮಾನ್ ಹಾಲಪ್ಪ ಎನ್ನುವವರು ಇವರ ಸಂಬಂಧೀಕರು, ಇವರು ರಿಟೈರ್ಡ್ ಶೇಕ್ದಾರರು, ಆದರು ಅಲ್ಲಿ ಒಂದು ಅಂಬೇಡ್ಕರ್ ಸಮಿತಿ ಎಂದು ಮಾಡಿಕೊಂಡು, ಇವರು ಕಾಂಗ್ರೆಸ್ (ಐ) ಗೆ ಸೇರಿದ್ದೇನೆಂದು ಡಿಕ್ಲೇರ್ ಮಾಡಿಕೊಂಡು ಎರಡು ದಿವಸದ ನಂತರವೇ ಆ ಸಮಿತಿಗೆ ಕೊಟ್ಟರು.

ಶ್ರೀ ಬಿ. ಬಸವಲಿಂಗಪ್ಪ .— ಅಲ್ಲಿ ನನ್ನ ಸಂಬಂಧಿಗಳು ಯಾರೂ ಇಲ್ಲ.

ಶ್ರೀ ಎಸ್, ಎಂ. ಶೀರ್ನಾಳಿ ಚಂದ್ರಶೇಖರ್ .— ನಮ್ಮ ಸಂಬಂಧಿಗಳಿಗೆ ನೀವು ಕೊಡತಕ್ಕದ್ದು ಗೊತ್ತಿದೆ.

SRI B. BASAVALINGAPPA .— I am sorry. The hon. Member Sri Sheernalli, S. M. Chandrashekar is persisting and saying that Sri Halappa is related to me. Sir, I say Sri Halappa is not ralated to me.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ .— ಅಲ್ಲಿ ಸುಮಾರು ೬೦೦ ಎಕರೆ ಜಮೀನನ್ನು ತರಾತುರಿಯಿಂದ ಕೊಟ್ಟರು.

ಶ್ರೀ ಎ. ಜಿ ಕೊಡಗಿ .— ಮಾನ್ಯ ಬಸವಲಿಂಗಪ್ಪನವರು ನನಗೆ ಅವರು ಸಂಬಂಧವಿಲ್ಲ ಎಂದು ಹೇಳಿದ ಮೇಲೆ ಮತ್ತೆ ಮತ್ತೆ ಅದನ್ನೇ ಹೇಳಿದರೆ ಹೇಗೆ? ಹಾಗೆ ಹೇಳುವುದಾದರೆ ಅದು ನೇರ ಆಪಾದನೆಯಾಗುತ್ತದೆ, ಆದ್ದರಿಂದ ಮಾನ್ಯ ಅಧ್ಯಕ್ಷರು ಅದನ್ನು ರೆಕಾರ್ಡಿನಿಂದ ತೆಗೆಸಬೇಕು.

ಅಧ್ಯಕ್ಷರು .— ಮಾನ್ಯ ಸದಸ್ಯರು ನಿಯಮಾವಳಿಗಳನ್ನು ಬಿಟ್ಟು ಮಾತನಾಡಬಾರದು. ಮಾತನಾಡುವಾಗ ವಿಷಯಕ್ಕೆ ಸಂಬಂಧಪಟ್ಟ ಗಂಭೀರವಾದ ವಿಚಾರಗಳನ್ನು ಹೇಳಬೇಕು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ನಾನು ಮಾನ್ಯ ಬಸವಲಿಂಗಪ್ಪನವರೂ ಒಂದೇ ಪಕ್ಷದಲ್ಲಿದ್ದವರು. ಅವರು ಯಾವಾಗ ಕಾಂಗ್ರೆಸ್ ಐ ಸೇರಿದ್ದೇನೆಂದು ಡಿಕ್ಲೇರ್ ಮಾಡಿಕೊಂಡರೋ ಆದಾವ ಕೆಲವು ದಿವಸಗಳಲ್ಲಿಯೇ ೮೦೦ ಎಕರೆ ಜಮೀನನ್ನು ಅಂಬೇಡ್ಕರ್ ಸಮಿತಿಯ ಹೆಸರಿನಲ್ಲಿಕೊಟ್ಟಿದ್ದಾರೆ. ಕೆಲವು ದಿವಸಗಳಲ್ಲಿ ಅಂಬೇಡ್ಕರ ಸಮಿತಿಯು ರಿಜಿಸ್ಟರ್ ಆಯಿತು. ಇದಕ್ಕೆ ಜಮೀನು ಕೊಡಬೇಕು ಎಂದು ಕ್ಯಾಬಿನೇಟ್‌ನಲ್ಲಿಯೂ ಸಹ ತೀರ್ಮಾನವಾಯಿತು. ನಮ್ಮ ದುರ್ದೈವ ಆ ೮೦೦ ಎಕರೆ ಜಮೀನಿನಲ್ಲಿ ಸುಮಾರು ೨೫೦–೩೦೦ ಕುಟುಂಬಗಳು ಸಾಗುವಳಿ ಮಾಡುತ್ತಿದ್ದರು. ಇವರು ಅಂಬೇಡ್ಕರ್ ಸಮಿತಿಗೆ ಜಮೀನು ಕೊಟ್ಟಿದ್ದಾರೆಂದು ತಿಳಿದ ಮೇಲೆ ನನ್ನ ಹತ್ತಿರ ಬಂದು ಅವರು ಬಾಯಿ ಬಾಯಿ ಬಡೆದುಕೊಂಡರು, ನನಗೆ ಅರ್ಜಿಯನ್ನು ಕೊಟ್ಟರು. ನಾನು ಅರ್ಜಿಯನ್ನು ಸರ್ಕಾರಕ್ಕೆ ಕಳಿಸಿದ್ದು ಆಯಿತು.

ಶ್ರೀ ಬಿ. ಬಸವಲಿಂಗಪ್ಪ .— ಮಾನ್ಯ ಸದಸ್ಯರು ಸುಳ್ಳು ಹೇಳುವುದಕ್ಕೆ ಸ್ವಲ್ಪ ಮಿತಿ ಇರಲಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ನಾನು ಹೇಳುವುದು ಸುಳ್ಳು ಆದರೆ ನನ್ನ ಶಾಸಕತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ದೇವರು ನನಗೆ ಬೇರೆ ರೀತಿಯಲ್ಲಿ ಸಂಪಾದನೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾನೆ.

ಶ್ರೀ ಬಿ. ಬಸವಲಿಂಗಪ್ಪ .— ವಿಚಾರಣೆ ಮಾಡಿಸಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ .— ಕ್ಯಾಬಿನೇಟ್‌ನಲ್ಲಿ ತೀರ್ಮಾನವನ್ನು ತೆಗೆದುಕೊಂಡರು ನಾನು ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೂ ಕಾಗದವನ್ನು ಬರೆದೆ ಎಂಥ ಅನ್ಯಾಯ. ೩೦೦ ಜನ ಹರಿಜನ ಕುಟುಂಬಗಳು ವಾಸ ಮಾಡುತ್ತಿದ್ದ ಸ್ಥಳದಲ್ಲಿ ಅವರೆಲ್ಲರನ್ನು ಎಬ್ಬಿಸತಕ್ಕ ಕೆಲಸ ನಡೆಯುತ್ತದೆ ಎಂದರೆ ನಾವೇನು ಹೇಳಬೇಕು ? ಒಹುಶಃ ಅವರ ದೃಷ್ಟಿಯಲ್ಲಿ ಇದೊಂದು ಕಲ್ಯಾಣ ಕೆಲಸವೇ. ನೀವು ದಲಿತ ವರ್ಗಕ್ಕೆ ಒಳ್ಳೆಯದು ಮಾಡಿದ್ದೇವೆಂದು ಹೇಳುತ್ತೀರಿ, ಇದು ಒಳ್ಳೆಯ ಕೆಲಸವೇ ಎಂದು ನಾನು ನಿಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ .— ಅದಕ್ಕೆ ಪ್ರೆಸಿಡೆಂಟ್ ಯಾರು ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ .— ಮಾನ್ಯ ಹಾಲಪ್ಪನವರು, ಮಾನ್ಯ ಗುರುಲಿಂಗಪ್ಪ ಜವಳಿ ಎನ್ನುವವರು ಅದರ ಅಧ್ಯಕ್ಷರು.

ಶ್ರೀ ಬಸವಲಿಂಗಪ್ಪ .— ಮಾನ್ಯ ಅಧ್ಯಕ್ಷರೇ, ನಾವು ಅಂಬೇಡ್ಕರ್ ಸಮಿತಿಗೆ ಜಮೀನನ್ನು ಕೊಟ್ಟಿದ್ದೇವೆ. ಕೊಡಬಾರದು ಎಂದು ಹೇಳುತ್ತಿರಾ ? ಕ್ಯಾಬಿನೆಟ್‌ನಲ್ಲಿ ಇದಕ್ಕೆ ಜಮೀನನ್ನು ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡು ಕೊಟ್ಟಿದ್ದೇವೆ. ಅವರು ಇದರ ಅಧ್ಯಕ್ಷರಾಗಿದ್ದಾರೆ. ಇದು ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದವರ ಕೆಲಸವಲ್ಲವೇ, ಅವರಿಗೇ ಕೊಟ್ಟಿದ್ದೇವೆ, ನಾನು ಇನ್ನೂ ಅಧಿಕಾರದಲ್ಲಿದ್ದರೆ, ಒಳ್ಳೆಯ ಕೆಲಸ ಮಾಡುವುದಕ್ಕೆ ಇನ್ನೂ ಜಾಸ್ತಿ ಜಮೀನನ್ನು ಕೊಡುತ್ತಿದ್ದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ .— ಹಾಲಪ್ಪನವರೂ ಅವರ ಹೆಸರಿನಲ್ಲಿ ಮಂಜೂರು ಮಾಡಿಸಿಕೊಂಡರು, ಮಾನ್ಯ ಗುರುಲಿಂಗಪ್ಪ ಜವಳಿಯವರು ಅದರ ಉತ್ಸವ ಮೂರ್ತಿಗಳು, ಯಾವ ಡಾಕ್ಟರ್ ಅಂಬೇಡ್ಕರ್ ಅವರು ಯಾವ ಜನಾಂಗಕ್ಕೆ ಹೋರಾಟ ಮಾಡಿದರೋ ಆ ಜನಾಂಗಕ್ಕೆ ಅನ್ಯಾಯ ಮಾಡಿ ಈ ಸಮಿತಿಗೆ ಜಮೀನನ್ನು ಕೊಡತಕ್ಕ ಉದ್ದೇಶವಾದರೂ ಏನು ? ಅವರ ಜಾತಿಯ ೩೦೦–೪೦೦ ಜನರು ಬಗರ್ ಹುಕುಂನಲ್ಲಿ ಆ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡಿದ್ದರು. ಈಗ ಅವರೆಲ್ಲರ ಗುಡಿಸಲುಗಳನ್ನು ತೆಗೆದುಹಾಕಿದ್ದಾರೆ. ಇದು ಡಾಕ್ಟರ್ ಅಂಬೇಡ್ಕರ ಮನಸ್ಸಿಗೆ ಶಾಂತಿ ತರತಕ್ಕ ಕೆಲಸವೇ ಎಂದು ನಾನು ಅವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಅರ್ಥ ಮಂತ್ರಿಗಳು ಕಳೆದ ಲೋಕ ಸಭೆಯ ಚುನಾವಣೆಯ ವಿಚಾರದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದರೆ ಕಳೆದ ಸಭೆಯಲ್ಲಿ ಮಾನ್ಯ ಸದಸ್ಯರಾದ ಜೆ. ಎಚ್. ಪಟೇಲರು ಗೌಜಿಗನ ಹಕ್ಕಿಯನ್ನು ಉಪಯೋಗಿಸಿಕೊಂಡು ಮತವನ್ನು ಪಡೆದರು ಎನ್ನುವ ಮಾತನ್ನು ಹೇಳಿದರು. ಈ ಸಾರಿ ನಾವು ಎಲ್ಲಾ ಹಕ್ಕಿಗಳನ್ನು ಗೂಡಿನಿಂದ ಬಿಟ್ಟುಬಿಟ್ಟಿದ್ದೇವೆ. ನಮ್ಮ ಪಕ್ಷದಲ್ಲಿ ಅಂಥವರು ಯಾರೂ ಇಲ್ಲ ಎಂದು ನಾನು ಸಂತೋಷ ಪಡತಕ್ಕ ವಿಚಾರ.

ಶ್ರೀ ಜೆ. ಎಚ್. ಪಟೇಲ್ .— ತಾವು ಅನುಮತಿ ಕೊಟ್ಟರೆ, ಈಗಿರುವವರು ಗೌಜಿಗನ ಹಕ್ಕಿಗಳಲ್ಲ ಈ ಮೀನು ಹಿಡಿಯುವುದಕ್ಕೆ ಮೀನು ಹಿಡಿಯುವವರು ಎರೆಹುಳುಗಳನ್ನು ಉಪಯೋಗಮಾಡುತ್ತಾರೆ, ಆ ತರಹ ನಮ್ಮ ಸದಸ್ಯರು ಆಗಿದ್ದಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮೊನೆ ಹಿಡಿಯಲಿಕ್ಕೆ ನಾವೇನು ಅಸ್ತ್ರಗಳಾಗಿಲ್ಲ. ಕರ್ನಾಟಕದಲ್ಲಿ ಯಾವ ರಾಜ್ಯದಲ್ಲಿಯೂ ಇಲ್ಲದಂಥ ಉನ್ನತ ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಜಾರಿಗೆ ತಂದು ಜನತೆಯ ವಿಶ್ವಾಸವನ್ನು ಗಳಿಸಿರುವ ಪಕ್ಷ ಅಂದರೆ ನಮ್ಮ ಪಕ್ಷ. ಜನ ಭರವಸೆ ಇಟ್ಟಿರುವುದಾದರೂ ಕೂಡ ನಮ್ಮ ಏಕೈಕ ನಾಯಕಿಯಾದ ಇಂದಿರಾಗಾಂಧಿಯವ ರಲ್ಲಿ. ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಬೇಕಾದರೆ, ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸ ಬೇಕಾದರೆ ಅದು ಶ್ರೀಮತಿ ಇಂದಿರಾಗಾಂಧಿಯವರಿಂದಲೆ ಎಂದು ನಮ್ಮ ಜನ ಅರ್ಥಮಾಡಿಕೊಂಡಿದ್ದಾರೆ. ನಾವೇನು ಭರವಸೆಗಳನ್ನು ಕೊಟ್ಟಿದ್ದೇವೆ. ಅವುಗಳನ್ನು ಈಡೇರಿಸಲಿಕ್ಕೆ ಸತತವಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದನ್ನು ಇತರೆ ಎಲ್ಲಾ ಸರ್ಕಾರಗಳೂ ಸಹ ಮಾಡಬೇಕಾಗಿದೆ. ನಾವು ಸಹ ಈ ಕೆಲಸ ಗಳನ್ನು ಮಾಡುವುದಿಲ್ಲ ಎಂದರೆ, ಜನ ನಮ್ಮನ್ನು ಕ್ಷಮಿಸುವುದಿಲ್ಲ ಎನ್ನುವ ಮಾತನ್ನು ನಾನು ಒಪ್ಪು ತ್ತೇನೆ. ಇದು ಮಾಡದಿದ್ದರೆ, ಜನರಲ್ಲಿ ಚುನಾವಣೆಯಲ್ಲಿ ನಂಬಿಕೆ ಹೋಗುತ್ತದೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೋಗುತ್ತದೆ. ಮತ್ತು ಜನರ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಮತ್ತು ಜನತೆ ಮುಂದೆ ಯಾವ ಚುನಾವಣೆಯಲ್ಲಿಯೂ ಭಾಗವಹಿಸುವುದಿಲ್ಲ ಎನ್ನುವ ಮಾತನ್ನು ಬುದ್ಧಿಜೀವಿಗಳು ಒಪ್ಪಬೇಕು. ಒಂದು ಪಕ್ಷದ ಸಿದ್ಧಾಂತದಲ್ಲಿ ಸರ್ಕಾರವನ್ನು ರಚನೆ ಮಾಡಿಕೊಂಡಾಗ ಯಾರು ಶೋಷಿತ ವರ್ಗದವರು ಇದ್ದಾರೆ ಅವರಿಗೆ ಅನ್ಯಾಯವಾಗಿದೆ ಎಂದರೆ ಮಾನ್ಯ ಬಸವಲಿಂಗಪ್ಪನವರು ಆತ್ಮವಂಚನೆ ಮಾಡಿಕೊಂಡ ಹಾಗೆ ಎಂದು ಹೇಳದೆ ಗತ್ಯಂತರವಿಲ್ಲ. ಅವರೇನಾದರೂ ಈ ಬಜೆಟ್ ಭಾಷಣವನ್ನು ಓದಿದ್ದಾರೆಯೋ ಎಂದು ನಾನು ಕೇಳುತ್ತೇನೆ. ಪ್ರತಿಯೊಂದು ಐಟಂನಲ್ಲಿಯೂ ಕೂಡ ಹಿಂದಿನ ಸಾಲಿ ಗಿಂತ ಈ ಸಾಲಿನಲ್ಲಿ ಹೆಚ್ಚಿನ ಹಣವನ್ನು ವಿನಿಯೋಗಿಸಲಾಗಿದೆ ಎನ್ನುವಂಥ ಒಂದು ಕರಪತ್ರವನ್ನು ಈ ಸದನದ ಮುಂದೆ ಇಟ್ಟಾಗ ಅದನ್ನು ಮೆಚ್ಚಿಕೊಳ್ಳದೆ ಇದ್ದರೆ ಹೇಗೆ ? ಇದು ಬಿಟ್ಟು ಯಾವುದೋ ವರ್ಗಾವರ್ಗಿಯ ವಿಚಾರ, ಪ್ರಮೋಷನ್ ವಿಚಾರ ಹೇಳಿದರೆ ಹೇಗೆ ?

ಈವೊತ್ತು ಬ್ರಾಹ್ಮಣರು ಒಂದು ಸಮ್ಮೇಳನ ಮಾಡುತ್ತಾರೆ ; ಎಂದರೆ ಎಲ್ಲಾ ಜಾತಿಯವರು ಹೇಗೆ ಸಮ್ಮೇಳನ ಮಾಡುತ್ತಾರೋ ಅದೇರೀತಿ ಇವರೂ ಮಾಡುತ್ತಾರೆ ಅದಕ್ಕೆ ಯಾರನ್ನಾದರೂ ಕರೆಯುತ್ತಾರೆ, ನಮ್ಮವರೇ ಆದ ಮಂತ್ರಿಗಳು ಬರಬಹುದು ಅಥವಾ ಶಾಸಕರೇ ಬರಬಹುದು ? ಹಾಗಾ ದರೆ ಆ ಸಮ್ಮೇಳನಕ್ಕೆ ಶಾಸಕರಾಗಲಿ ಅಥವಾ ಮಂತ್ರಿಗಳಾಗಲಿ ಹೋಗುವುದು ತಪ್ಪಾದೀತೇ ? ಮಾನ್ಯ ಮಂತ್ರಿಗಳಾಗಲಿ ಅಥವಾ ಮುಖ್ಯ ಮಂತ್ರಿಗಳಾಗಲಿ ಆ ಸಮ್ಮೇಳನಕ್ಕೆ ಆ ಕೋಮಿಗಾಗಲಿ ಅಥವಾ ಆ ಜನಾಂಗಕ್ಕಾಗಲಿ ಎಲ್ಲಾ ಸೌಕರ್ಯಗಳೂ ಸಿಕ್ಕುಬಿಡುತ್ತವೆಯೇನೂ ? ಹಾಗೆ ಸಿಕ್ಕುವುದಿಲ್ಲ ಅವರು ಆ ಸಮ್ಮೇಳನಗಳಿಗೆ ಹೋದಾಗ ಬರೇ ಹಾರವನ್ನು ಹಾಕಿಸಿಕೊಂಡು ಬರುತ್ತಾರೆ, ಅಷ್ಟೆ. ನಾನು ಈ ವಿಷಯ ದಲ್ಲಿ ಹೇಳಬೇಕಾದರೆ ನಮ್ಮ ದೇಶದಲ್ಲಿ ಎಲ್ಲಿಯವರೆಗೆ ಆ ಅರ್ಜಿಗಳಲ್ಲಿ ಜಾತಿಯನ್ನು ಕೇಳುವ ಪದ್ಧತಿ ಇಟ್ಟುಕೊಂಡಿರುತ್ತಾರೋ ಅಲ್ಲಿಯವರೆಗೂ ಕೂಡ ಆ ಜಾತಿಯನ್ನು ಅಳಿಸಲಿಕ್ಕೆ ಸಾಧ್ಯವಿಲ್ಲಾ. ಶೀರನಾಳಿ ಚಂದ್ರಶೇಖರ್‌ರವರು ಹರಿಜನರಿಗೂ ಮತ್ತು ಬ್ರಾಹ್ಮಣರಿಗೂ ವಿವಾಹ ಮಾಡಿಸಬೇಕು ಎಂದು ಭಾಷಣ ಮಾಡಿದರೆ ನನ್ನನ್ನು ಬ್ರಾಹ್ಮಣ ಅಲ್ಲ ಎಂದು ಹೇಳುತ್ತಾರೆಯೋ ? ಎಲೆಕ್ಷನ್‌ನಲ್ಲಿ ಓಟು ಕೊಡಬೇಕಾದರೂ ಸಹ ಬ್ರಾಹ್ಮಣ ಜನಾಂಗದವರೇ ಓಟು ಕೊಡುತ್ತಾರೆ. ಹಾಗಿದ್ದಮೇಲೆ ನಾನು ಹೇಳುವುದು ಏನೆಂದರೆ ಈ ಸಮಾಜದಲ್ಲಿ ಬೆಳೆದಿರತಕ್ಕಂಥಾ ರೂಢಾಬಲದ ಮೂಲಗಳು ಏನು ಇವೆ ಅವನ್ನು ಮೊದಲು ಕೀಳ ಬೇಕಾಗುತ್ತದೆ. ತಮಗೆ ಹೇಳಬೇಕಾದರೆ ಬ್ರಾಹ್ಮಣರಲ್ಲೂ ಸಹ ಬಹಳ ಬಡವರು ಇದ್ದಾರೆ. ಬ್ರಾಹ್ಮಣ ರಲ್ಲೂ ಎಷ್ಟೋ ಕಷ್ಟಪಡುತ್ತಿದ್ದಾರೆ. ಶ್ರೀಮಾನ್ ಬಸವಲಿಂಗಪ್ಪನವರನ್ನು ನೋಡಿದರೆ ಬ್ರಾಹ್ಮಣ ರಂತೆ ಕಾಣಿಸುತ್ತಾರೆ ಆದರೆ ಅವರನ್ನು ಹಾಗೆ ಕರೆಯುವ ಹಾಗಿಲ್ಲಾ. ಶ್ರೀಮಾನ್ ಬಸವಲಿಂಗಪ್ಪನವರಿಗೆ ಈ ಸಂದರ್ಭದಲ್ಲಿ ಹೇಳುತ್ತೇನೆ, ಬ್ರಾಹ್ಮಣರಲ್ಲಿ ಎಷ್ಟೋ ಜನ ವಿಧವೆಯರು ಇದ್ದಾರೆ. ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಎಷ್ಟು ಕಷ್ಟಪಡುತ್ತಿದ್ದಾರೆ ಎಂದರೆ ತಿನ್ನುವುದಕ್ಕೆ ಒಂದು ಹೊತ್ತು ಇರುವುದಿಲ್ಲ, ಅಂಥಾದ್ದರಲ್ಲೂ ಕೂಡ ಎಲ್ಲೆಲ್ಲೋ ಯಾರ್ಯಾರೋ ಮನೆಯಲ್ಲೋ ಕೆಲಸ ಮಾಡಿಕೊಂಡು ಅವರ ಮಕ್ಕಳ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದಾರೆ. ಎಲ್ಲಾ ಕೋಮಿನಲ್ಲೂ ಬಡವರು ಇದ್ದಾರೆ, ಶ್ರೀಮಂತರೂ ಇದ್ದಾರೆ ಅದನ್ನು ಬಸವಲಿಂಗಪ್ಪನವರು ತಿಳಿಯಬೇಕು. ಎಲ್ಲಾ ದೃಷ್ಟಿಯಿಂದಲೂ ಬಸವಲಿಂಗಪ್ಪನವರನ್ನು ನೋಡಿದರೆ ಬ್ರಾಹ್ಮಣರಂತೆ ಕಾಣುತ್ತಾರೆ. ಆದರೆ ನಾವು ಸಿಸವಾಗಲೂ ಕೂಡ ಅವರನ್ನು ಬ್ರಾಹ್ಮಣರು ಎಂದು ಕರೆಯುವುದಕ್ಕೆ ಸಾಧ್ಯವಿಲ್ಲಾ. ಅದೇ ನಮ್ಮ ದುರ್ದೈವ. ನಮ್ಮನ್ನು ಬ್ರಾಹ್ಮಣರು ಎಂದು ಕರೆಯಬಹುದು. ಅವರನ್ನು ಕರೆಯುವುದಕ್ಕಾಗುವುದಿಲ್ಲ, ಅಲ್ಲದೇ ಎಲ್ಲಾ ವಿಚಾರ ದಲ್ಲೂ ಸಹ ನಾವು ಬ್ರಾಹ್ಮಣರಾಗಿದ್ದೇವೆ.

ಶ್ರೀ ಬಿ ಬಸವಲಿಂಗಪ್ಪ.—ಅಧ್ಯಕ್ಷರೇ, ನನ್ನನ್ನು ಪುನಃ ಕೇಳುವುದು ಬೇಡ ನನಗೆ ಇಬ್ಬರ ಮೇಲೆ ಪ್ರೀತಿ ಬಹಳ ಇದೆ. ಒಬ್ಬರು ಭಾಸ್ಕರ ನಾಯಿಡು ಇನ್ನೊಬ್ಬರು ಶೀರನಾಳಿ ಚಂದ್ರಶೇಖರ್‌ರವರು. ಅವರು ಯಾವ ವಿಷಯದ ಮೇಲೆ ಏನು ಬೇಕಾದರೂ ಹೇಳುತ್ತಾರೆ. ಆದರೆ ಅವರನ್ನು ಕೇಳುವವರು ಯಾರು ಇಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಅವರು ಮಂತ್ರಿಗಳಾಗಲಿ ಎಂದು ಹಾರೈಸುತ್ತೇನೆ. ಅವರನ್ನು ನೋಡಿದರೆ ನನಗೆ ಆಗುವ ಸಂಕಟ ಹೇಳತೀರದು.

ಶ್ರೀ ಶೀರನಾಳಿ ಚಂದ್ರಶೇಖರ್.—ಮೊಸಳೆ ಕಣ್ಣೀರು ಇಟ್ಟ ಹಾಗೆ ಮಾತನಾಡಿದ್ದೀರಿ. ಅವಕ್ಕಾಗಿ ತಮಗೆ ನನ್ನ ಧನ್ಯವಾದಗಳು ಕಷ್ಟ ಅನ್ನುವುದು ಎಲ್ಲ ವರ್ಗದಲ್ಲೂ ಇದೆ ನಮ್ಮ ಕೋಮಿನವರು ಒಬ್ಬ ಮಂತ್ರಿ ಯಾದರೆ ಅವರನ್ನು ಆ ಸಮ್ಮೇಳನಕ್ಕೆ ಕರೆಯುತ್ತಾರೆ, ಆದರೆ ಈ ಸಮಾರಂಭದಲ್ಲಿ ಭಾಗವಹಿಸಬೇಕೇ ಬೇಡವೇ ಎನ್ನುವ ಪ್ರಶ್ನೆ ಬಂದಾಗ ಅದು ಅವರ ವೈಯುಕ್ತಿಕವಾದ ವಿಚಾರ. ಆ ಸಮ್ಮೇಳನದಲ್ಲಿ ತಮ್ಮವರು ಇದನ್ನು ಮಾಡಿದ್ದಾರೆ ಎಂದು ಅದರಲ್ಲಿ ಭಾಗವಹಿಸಿದರೆ ಅದರಲ್ಲಿ ಏನಾದರೂ ತಪ್ಪು ಉಂಟೇ ? ಹಾಗೆ ಒಂದು ಸಮ್ಮೇಳನದಲ್ಲಿ ಶ್ರೀಮಾನ್ ಕಸಬೆಯುವರು ಪೂಜೆ ಮಾಡುವವರಿಗೆ ೧೦೦ ರೂಪಾಯಿ ಕೊಡುತ್ತೇವೆ ಎಂದು ಹೇಳಿದರೆ ಅದು ತಪ್ಪೇ ?

ಶ್ರೀ ಬಿ. ಬಸವಲಿಂಗಪ್ಪ.—ಕೊಟ್ಟು ನೋಡಿ,

ಶ್ರೀ ಶೀರನಾಳಿ ಚಂದ್ರಶೇಖರ್.—ವಕ್ಫ್ ಮಂಡಲಿಗೆ ೫ ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ ಹಾಗಿರುವಾಗ ಈ ದೇವಸ್ಥಾನಗಳಲ್ಲಿ ಪೂಜೆ ಮಾಡತಕ್ಕಂಥಾ ಪೂಜಾರಿಗಳಿಗೆ ಮಾಸಾಶನ ಕೊಡುವುದರಲ್ಲಿ ತಪ್ಪೇನಿದೆ. ಅನೇಕ ದೇವಸ್ಥಾನಗಳಲ್ಲಿ ದೀಪ ಹಚ್ಚುವುದಕ್ಕೆ ದುಡ್ಡೇ ಇಲ್ಲ, ಅದಕ್ಕೆ ಎಣ್ಣೆ ತರಬೇಕು, ಆರತಿ ಮಾಡುವುದಕ್ಕೆ ಬತ್ತಿ ವಗೈರೆ ತರುವುದಕ್ಕೇನೇ ದುಡ್ಡು ಇಲ್ಲದ ಹಾಗಾಗಿದೆ. ಇದರಿಂದ ಅಲ್ಲಿನ ಪೂಜಾರಿಗಳು ದೇವರಿಗೆ ಪೂಜೆ ಮಾಡುವುದಕ್ಕೇನೇ ಕಷ್ಟವಾಗಿದೆ. ನಮ್ಮ ದೇವಾಲಯಗಳ ಪರಿಸ್ಥಿತಿ ಶ್ರೀಮಾನ್ ಬಸವಲಿಂಗಪ್ಪನವರಿಗೆ ಗೊತ್ತೇ ಇಲ್ಲ ಅಂತ ಕಾಣುತ್ತದೆ, ಏಕೆಂದರೆ ಅವರು ಅಲ್ಲಿಗೆ ಹೋಗೋದೇ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಅಲ್ಲಿಗೆ ಹೋದರೆ ಒಂದು ತೆಂಗಿನಕಾಯಿ ಚಿಪ್ಪೂ ಸಿಕ್ಕುವುದಿಲ್ಲ, ಏಕೆಂದರೆ ಅವರು ಜಮೀನು ಕಿತ್ತುಕೊಂಡರು ಎಂದು.

ಶ್ರೀ ಶೀರನಾಳಿ ಚಂದ್ರಶೇಖರ್.—ತಮಗೆ ಹೇಳಬೇಕಾದರೆ ಒಂದು ಕಾಲದಲ್ಲಿ ದೇವಸ್ಥಾನಗಳಿಗೆ ಸೇರಿದಂಥಾ ಉತ್ಪತ್ತಿ ಹೇರಳವಾಗಿ ಇತ್ತು. ಅದರಿಂದ ಅವರು ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು. ಈ ಭೂಸುಧಾರಣೆ ಕಾಯಿದೆ ಬಂದಮೇಲೆ ದೇವಸ್ಥಾನಕ್ಕೆ ಸೇರಿದಂಥಾ ಭೂಮಿಗಳೆಲ್ಲಾ ಸರ್ಕಾರಕ್ಕೆ ಹೋಯಿತು. ಆದುದರಿಂದ ಈ ವೊತ್ತಿನ ದಿವಸ ಅನೇಕ ದೇವಸ್ಥಾನಗಳಲ್ಲಿ ಉತ್ಪತ್ತಿ ಹೋಗಿ, ಅಲ್ಲಿ ದೇವರಿಗೆ ದೀಪ ಹಚ್ಚುವುದಕ್ಕೇನೇ ಕಷ್ಟವಾಗಿರುವಾಗ ಇನ್ನು ಪೂಜಾರಿಗಳ ಸ್ಥಿತಿ ಏನು ಅನ್ನುವುದನ್ನು ಯೋಚನೆ ಮಾಡಬೇಕು. ಅವರು ತಮ್ಮ ಹೊಟ್ಟೆ ಮೇಲೆ ಒದ್ದೆಬಟ್ಟೆ ಹಾಕಿಕೊಳ್ಳಬೇಕು.

ಶ್ರೀ ಕೆ.ಬಿ. ಶಿವಯ್ಯ.—ಹಾಗಾದರೆ ಏನು ಮಾಡಬೇಕು ಅಂತ ಹೇಳುತ್ತೀರಿ ?

ಶ್ರೀ ಶೀರನಾಳಿ ಚಂದ್ರಶೇಖರ್.—ಅನೇಕ ದೇವಸ್ಥಾನಗಳಲ್ಲಿ ಉತ್ಪತ್ತಿ ಇಲ್ಲದೆ ಪೂಜೆ ಮಾಡುವುದಕ್ಕೆ ಆಗುತ್ತಾ ಇಲ್ಲ. ಹೀಗಿರುವಾಗ ಒಬ್ಬ ಮುಜರಾಯಿ ಇಲಾಖಾ ಮಂತ್ರಿಗಳು ಪ್ರವಾಸಕ್ಕೆ ಹೋದಾಗ ಈರೀತಿ ಇದೆ ಎಂದು ಯಾರೋ ಒಬ್ಬರು ಅರ್ಜಿ ಕೊಟ್ಟರೆ. ಅದಕ್ಕೆ ಈರೀತಿ ಮಾಡುತ್ತೇವೆ ಅಂತ ಹೇಳಿದರೆ ಅದು ತಪ್ಪೇ ; ಈವೊತ್ತಿನ ದಿವಸ ಅವರಿಗೆ ಈ ವೃತ್ತಿಯೇ ಬೇಡ ಅನ್ನುವುದಾದರೆ, ಯಾವ ದೇವಸ್ಥಾನಗಳೂ ಬೇಡ, ಯಾವ ಒಂದು ಮಠಗಳೂ ಬೇಡ ಅಂತ ನೀವು ತೀರ್ಮಾನಿಸಿರುವುದಾದರೆ ತೆಗೆದು ಬಿಡಿ. ಮುಂದೆ ಇದರ ಒಂದು ವ್ಯವಸ್ಥೆ ಏನು ಅನ್ನುವುದನ್ನೂ ಸಹ ನೋಡಿಕೊಂಡು ತೀರ್ಮಾನ ಮಾಡಿ.

ಇನ್ನು ಒಂದು ವಿಷಯವನ್ನು ಮಾನ್ಯ ಬಸವಲಿಂಗಪ್ಪನವರು ನೆನಪು ಇಟ್ಟುಕೊಳ್ಳಬೇಕು, ಅದೇನೆಂದರೆ ಈಗ ಶಕ್ತಿಶಾಲಿಯಾದಂಥಾ ಸರ್ಕಾರ ನಮ್ಮ ರಾಜ್ಯದಲ್ಲಿದೆ ಎನ್ನುವುದನ್ನು. ನಮ್ಮ ರಾಜ್ಯಕ್ಕೆ ಎಷ್ಟೇ ಕೊರತೆ ಬಂದಿರಲಿ ಅದನ್ನೇ ಮುಂದುವರಿಸಿಕೊಂಡು ಹೋಗುತ್ತಾರೆ ಅನ್ನುವುದು ಬೇಡ. ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಸಾಕಷ್ಟು ಪರ್ಚಸ್ಸು ಬೀರಿ ಈ ಬಗ್ಗೆ ಕಡಿಮೆ ಇರ

ಶಕ್ಯಂಥಾ ಹಣವನ್ನು ತರತಕ್ಕಂಥಾ ಶಕ್ತಿ ಇದೆ ಎನ್ನುವುದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈಗ ೨೦ ಕೋಟಿ ರೂಪಾಯಿ ಬಂದು ಕಲಪಿದ್ದಾಗಿವೆ ಅಂಥಾದ್ದರಲ್ಲಿ ಇನ್ನು ೧೫–೨೦ ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರದಿಂದ ತರುವುದಕ್ಕೇನೂ ಕಷ್ಟವಾಗುವುದಿಲ್ಲ. ತಮಗೆ ಹೇಳಬೇಕಾದರೆ ಈಗ ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕಿನವರು ತಾನೇ ತಾನಾಗಿ ಒದಗಿ ಬಂತು. ಅವರೆಲ್ಲ ಇದಕ್ಕೆ ಸಹಾಯವನ್ನು ಕೊಡುವುದಕ್ಕೆ ಮುಂದೆ ಬಂದರೂ. ಈ ವಿಷಯವಾಗಿಲ್ಲಾದರೂ ಕೂಡ ಮಾನ್ಯ ಬಸವಲಿಂಗಪ್ಪನವರು ಬಾಯಲ್ಲಿ ಒಂದು ಮೆಚ್ಚುಗೆಯ ಮಾತು ಬರಲಿಲ್ಲವಲ್ಲಾ ಅನ್ನುವುದೇ ನನ್ನ ದುಃಖ. ಈ ವಿಚಾರವಾಗಿ ಒಂದು ಒಳ್ಳೆಯ ಮಾತನ್ನು ಸಹ ಆಡುವುದಕ್ಕೆ ಸಾಧ್ಯವಿರಲಿಲ್ಲವೇ ?

ಇನ್ನು ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ಹೇಳುವುದಾದರೆ......

ಶ್ರೀ ಎಂ.ಸಿ. ಬಸಪ್ಪ.—ಅದರ ಕತೆ ಮುಗಿಯಿತಲ್ಲಾ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.— ಏನೂ ಮುಗಿಯಲಿಲ್ಲ. ಇನ್ನೂ ಜೀವಂತವಾಗಿದೆ. ಇನ್ನು ೩ ವರ್ಷದೊಳಗೆ ಈ ವಿಜಯನಗರ ಸ್ಟೀಲ್ ಪ್ಲಾಂಟ್ ಅನೇಕ ರೀತಿಯಲ್ಲಿ ಮುಂದುವರಿಯುತ್ತದೆ ಎಂದು ಹೇಳುತ್ತೇನೆ, ಇದುವರೆಗೆ ಏತಕ್ಕೆ ಸ್ಥಗಿತವಾಗಿತ್ತು ಎಂದರೆ ಇಲ್ಲಿಯವರೆಗೆ ರಾಜ್ಯ ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ಕೂಡ ಅಷ್ಟು ಹೊಂದಾಣಿಕೆ ಇಲ್ಲದೇ ಇದುದ್ದರಿಂದ ಅದರ ಕೆಲಸ ಸ್ಥಗಿತವಾಗಿತ್ತೇ ವಿನಾ ಅದಕ್ಕೆ ಇನ್ನಾವ ಕಾರಣವೂ ಇಲ್ಲ.

ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ ವಿಧಾನಸೌಧದಲ್ಲಿ ಬಹಳ ಕಾಲದಿಂದ ಬೇರುಬಿಟ್ಟದ್ದ ಅಧಿಕಾರಿಶಾಹಿಯನ್ನು ಬದಲಾವಣೆ ಮಾಡಿದ್ದಾರೆ ಅಷ್ಟೇ ಅಲ್ಲದೇ ಕೆಲವರನ್ನು ಹೊರಗೂ ಹಾಕಿದ್ದಾರೆ. ಈ ಸರ್ಕಾರದ ಶ್ರೇಯಸ್ಸಿನ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಒಂದು ಒಳ್ಳೆಯ ಮಾತನ್ನೂ ಆಡಲು ಸಾಧ್ಯವಿರಲಿಲ್ಲವೇ ?

ಇನ್ನು ದೇಶದ ಸಂಪನ್ಮೂಲಗಳ ಬಗ್ಗೆ ಸರಿಯಾಗಿ ವಿನಿಯೋಗವಾಗುತ್ತಾ ಇಲ್ಲ ಶಂಕೆ ನನಗೆ ಇದೆ ಎನ್ನುವ ಮಾತನ್ನು ಹೇಳಿದರು. ಆ ಬಗ್ಗೆ ಹೇಳಬೇಕಾದರೆ ವಿದ್ಯುಚ್ಛಕ್ತಿ ಮತ್ತು ನೀರಾವರಿ ಬಗ್ಗೆ ಕೋಟ್ಯಾಂತರ ರೂಪಾಯಿಯನ್ನು ವಿನಿಯೋಗ ಮಾಡುವುದಕ್ಕೆ ನಮ್ಮ ಬಡ್ಜೆಟ್ಟಿನಲ್ಲಿಟ್ಟುಕೊಂಡಿಲ್ಲವೇ ? ಈ ಬಡ್ಜೆಟ್ಟಿನಲ್ಲಿಟ್ಟಿರುವ ಹಣವನ್ನು ಯಾವುದರ ಬಗ್ಗೆ ಖರ್ಚು ಮಾಡುತ್ತಾರೆ ಅನ್ನುವುದನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆಯೋ ಎಂದು ನಾನು ಕೇಳುತ್ತೇನೆ. ಇವೆಲ್ಲಾ ಸಂಪನ್ಮೂಲಗಳಿಗೆ ಸೇರುವುದಿಲ್ಲವೇ ? ಎಷ್ಟು ಉತ್ಪತ್ತಿಯಾಗುತ್ತದೆ ಎಷ್ಟು ಖರ್ಚಾಗುತ್ತದೆ. ಎನ್ನುವುದನ್ನು ಮಾನ್ಯ ಸದಸ್ಯರು ಗಮನಹರಿಸಬೇಕು. ಒಂದು ಕಾಲದಲ್ಲಿ ರಾಜ್ಯದಲ್ಲಿ ಕೆಲವು ರಾಜಕಾರಣಿಗಳನ್ನು ತೃಪ್ತಿಪಡಿಸುವುದಕ್ಕೋಸ್ಕರ ಅನೇಕ ಸಂಸ್ಥೆಗಳನ್ನೂ ಮತ್ತು ಬೋರ್ಡ್‌ಗಳನ್ನು ಸೃಷ್ಟಿ ಮಾಡಿದ್ದಲ್ಲಾ ಅವೆಲ್ಲವನ್ನೂ ಇಂದಿನ ಸರ್ಕಾರ ಕಿತ್ತು ಒಗೆದಿದ್ದಾರೆ, ಅದನ್ನು ಮಾನ್ಯ ಸದಸ್ಯರು ತಿಳಿಯಬೇಕು. ಈ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ಲುಕ್ಸಾನಾಗುತ್ತದೆಂಬ ಕಾರಣದಿಂದ ಈ ಸಂಸ್ಥೆಗಳನ್ನು ಕಿತ್ತುಹಾಕಿದರು. ಸ್ವಾಮಿ, ಈಗ ೬ ಗಂಟೆಯಾಯಿತು, ನಾನು ನನ್ನ ಭಾಷಣವನ್ನು ನಾಳೆ ದಿವಸ ಮುಂದುವರಿಸುತ್ತೇನೆ.

ಅಧ್ಯಕ್ಷರು, ಆಗಬಹುದು. ಈಗ ಸಭೆ ಮೇಲೆದ್ದು ಪುನಃ ನಾಳೆ ಮಧ್ಯಾಹ್ನ ಒಂದು ಗಂಟೆಗೆ ಸೇರುತ್ತದೆ.

The House adjourned at Five minutes past six of the Clock to meet again at one of the clock on Tuesday, 17th June 1980.